THE BOOK WAS DRENCHED

TEXT FLY WITHIN THE BOOK ONLY

TEXT PROBLEM WITHIN THE BOOK ONLY

UNIVERSAL LIBRARY
OU_198528
UNIVERSAL LIBRARY

ಒಂದಾಣೆ ಮಾಲೆಯ ಬಹುಮಾನದ ಪುಸ್ತಕ.

ಮಕ್ಕಳಸಲುವಾಗಿ ಬರೆದ

ಸಚಿತ್ರ

# ಮಹಾತ್ಮಾ ಗಾಂಧಿ.

ಲೇಖಕ:—ಬಾಲಮಿತ್ರ.

ಮೊದಲನೆಯಾವೃತ್ತಿ ೧೫೦೦ ಪ್ರತಿ.

ಪ್ರಕಾಶಕರು,

ಶ್ರೀ. ಪ್ಯಾಟಿ ಶಾಮರಾಯರು,

ಸಂಚಾಲಕರು ಒಂದಾಣೆಮಾಲೆ ಬೆಳಗಾವಿ.

ಅಕ್ಟೋಬರ. ] ೧೯೩೩. [ ಬೆಲೆ ನಾಲ್ಕಾಣೆ.

ಮುದ್ರಕರು— ವಾಸುದೇವ ಸಾತಪ್ಪಾ ಚೌಗುಲೆ ಬೆಳಗಾವಿ
ಮುದ್ರಣ ಸ್ಥಳ— ಶ್ರೀಮಹಾವೀರ ಮುದ್ರಾಲಯ ಮಠದೋಣಿ ಬೆಳಗಾವಿ.

---

**ದೇಶಭಕ್ತರ ಚರಿತ್ರೆ ಗೊತ್ತಿಲ್ಲದೆ ದೇಶಸೇವೆ ಸಾಧ್ಯವಿಲ್ಲ !**

**ಸ್ವಲ್ಪೇ ಪ್ರತಿಗಳಿವೆ !** ಓದಿ ಆನಂದಪಡೆಯಿರಿ ! **ತ್ವರೆಮಾಡಿರಿ !!!**

ರಾಷ್ಟ್ರಸೂತ್ರಧಾರ

# ವೀರವಲ್ಲಭಭಾಯಿ

— ಸಚಿತ್ರ —

( ಜೀವನ ಚರಿತ್ರೆ )

ಲೇಖಕರು:—ಶ್ರೀ. **ಅನಂತ ಚಿಕ್ಕೋಡಿ.**

**ಮುನ್ನುಡಿ ಬರೆದವರು:—ದೇ. ಭ. ದೇಶಪಾಂಡೆ ಗಂಗಾಧರರಾಯರು.**

ಇದುವರೆಗೆ ಕನ್ನಡ ಭಾಷೆಯಲ್ಲಿ ಇಂತಹ ಉದ್ಬೋಧಕ ಚರಿತ್ರೆಯು ಮತ್ತೊಂದಾಗಿಲ್ಲ. ಆದುದರಿಂದ ಬೇಗನೇ ತರಿಸಿ ಓದಿ ಸಂತೋಷ ಪಡೆಯಿರಿ. ಪ್ರತಿಗಳೆಲ್ಲ ತೀರುತ್ತ ಬಂದಿವೆ. ಪುಸ್ತಕವು ಕ್ರೌನ ಆಕಾರದ ೧೦೦ ಪುಟಗಳಿಗೂ ಮಿಕ್ಕಿದೆ. **ನುಣುಪಾದ ಕಾಗದಗಳ ಮೇಲೆ ಅಂದವಾಗಿ ಮುದ್ದಾಗಿ ಮುದ್ರಿತವಾಗಿದೆ. ಮುಖಪೃಷ್ಠವು ಸುಂದರವಾದ ಎರಡು ಬಣ್ಣಗಳಲ್ಲಿ ಅಚ್ಚಾಗಿದ್ದು ಸರದಾರರ ಸುಂದರ ಚಿತ್ರವಿದೆ.**

ಪ್ರತಿಯೊಬ್ಬ ಕನ್ನಡಿಗನೂ ಈ ಪುಸ್ತಕವನ್ನು ತರಿಸಿ ಓದಲೇಬೇಕು. ಬೆಲೆ ತೀರಾ ಕಡಿಮೆ ೧೦ ಆಣೆ ಮಾತ್ರ. ಒಮ್ಮೆಲೆ ಕೊಳ್ಳುವ ವ್ಯಾಪಾರಸ್ಥರಿಗೆ ಒಳ್ಳೇ ಸವಲತ್ತು. ಬೇಗನೆ ಆರ್ಡರ ಕೊಡಿರಿ.

**ಕಾರ್ಯದರ್ಶಿ ಕ. ಸಾ. ಸೇ. ಮಂಡಲ ಬೆಳಗಾವಿ.**

---

ಪ್ರಕಾಶಕರು—ಪ್ಯಾಟಿ ಶಾಮರಾಯರು
ಸಂಚಾಲಕರು 'ಒಂದಾಣೆಮಾಲೆ' ಬೆಳಗಾವಿ.
ಪ್ರಕಾಶನ ಸ್ಥಳ—ಬೆಳಗಾವಿ ವೆಂಕಟರಮಣಗುಡಿಯ ಹತ್ತರಿನ ಬುಕ್ ಡಿಪೋ

# ಮುನ್ನುಡಿ.

ಈ ಸಲ ನಾನು ಸಾಬರಮತಿಯ ಸೆರೆಮನೆಯಲ್ಲಿದ್ದಾಗ ಕನ್ನಡ ವಾಙ್ಮಯದ ಬಗ್ಗೆ ಮತ್ತು ಈ ವಿಷಯಕ್ಕಿರುವ ನಮ್ಮ ಕರ್ತವ್ಯದ ಬಗ್ಗೆ ಬಹಳವಾಗಿ ವಿಚಾರಮಾಡಿದ್ದೇನೆ. ನಮ್ಮ ಪ್ರಾಂತದ ಸಂದಿಗೊಂದಿಗಳಲ್ಲಿ ಕೂಡ ನಮ್ಮ ವಾಙ್ಮಯವನ್ನು ಹರಡಿದ ಹೊರತು ಸ್ವರಾಜ್ಯಕ್ಕಾಗಿ ಯಾವದೇ ರೀತಿಯ ಸುಸಂಘಟಿತವಾದ ಪ್ರಯತ್ನದಲ್ಲಿ ನಮ್ಮ ಜನರನ್ನು ಒಂದುಗೂಡಿಸುವ ಕಾರ್ಯವು ನಮ್ಮಿಂದಾಗದು. ಈ ದೃಷ್ಟಿಯಿಂದ ಪ್ರತಿಯೊಂದು ಪ್ರಾಂತವೂ ಈಗ ಪ್ರಯತ್ನ ಮಾಡುತ್ತಿದೆ. ಹಿಂದೀ ಸಾಹಿತ್ಯದ ಪ್ರಚಾರವಂತೂ ದೇಶದ ನಾಲ್ಕೂ ನಿಟ್ಟಿನಲ್ಲಿ ಭರದಿಂದ ಸಾಗಿದೆ. ವಿಶಾಲ ವಿಶ್ವದ ಮೂಲೆಗಳಲ್ಲಿಯೂ ಹರಡಿರುವ ಜನರಿಗೆ ಅವಶ್ಯವಾದ ಗ್ರಂಥಗಳನ್ನು ಬಂಗಾಲಿ ಭಾಷೆಯಲ್ಲಿಯೇ ಪೂರೈಸಿಕೊಟ್ಟು ಬಂಗಾಲ ಪ್ರಾಂತವು ತನ್ನ ಜನರಲ್ಲಿ ವಿದ್ಯುತ್ಸಂಚಾರವನ್ನುಂಟು ಮಾಡಿದೆ. ಮಹಾರಾಷ್ಟ್ರವಾದರೂ ಇದೇ ರೀತಿಯಲ್ಲಿ ಕಾರ್ಯಮಾಡಿರುವದಲ್ಲದೆ ತನ್ನ ಎರಡು ಕೋಟಿ ಜನರಿಗೆ ಅಗ್ಗವಾದ ಪುಸ್ತಕಗಳನ್ನು ಹುಟ್ಟಿಸಿಕೊಡುವ ಕಾರ್ಯದಲ್ಲಿ ಈಗ ತೊಡಗಿಹೋಗಿದೆ.

ಮಹಾತ್ಮ ಗಾಂಧಿಯವರ ಕಾರ್ಯಕ್ಷಮವಾದ ಧುರೀಣತ್ವದಲ್ಲಿ ಗುಜರಾಥ ಪ್ರಾಂತವು ತನ್ನ ಸಾಹಿತ್ಯಸಂವರ್ಧನ ಕಾರ್ಯದಲ್ಲಿ ಆಶ್ಚರ್ಯಕರವಾದ ಪ್ರಗತಿಯನ್ನು ಮಾಡಿಕೊಂಡಿದೆ. ಕಳೆದ ಹದಿನೈದು ವರ್ಷಗಳಲ್ಲಿ ಗುಜರಾಥದ ಸಾಹಿತ್ಯಸೇವಕರು ತಮ್ಮ ಪ್ರಾಂತದವರಿಗೆ ಉತ್ತಮೋತ್ತಮವಾದ ಗ್ರಂಥಗಳು ಅಗ್ಗವಾದ ಬೆಲೆಗೆ ದೊರೆಯುವ ವಿಷಯದಲ್ಲಿ ಪ್ರಯತ್ನದ ಪರಮಾವಧಿಯನ್ನು ಮಾಡಿದ್ದಾರೆ. ಇವರ ಪ್ರಗತಿಯಾದರೂ ವಿಸ್ಮಯಕರವಾಗಿದೆ. ಅಹಮುದಾಬಾದಿನ ನವಜೀವನ ಕಾರ್ಯಾಲಯ, ವಿದ್ಯಾಪೀಠ ಪ್ರಕಾಶನ ಸಂಘ ಮುಂತಾದ ಸಂಸ್ಥೆಗಳು, ಕಾಠೇವಾಡದ ದಕ್ಷಿಣಾಮೂರ್ತಿ ಮತ್ತು ಸೌರಾಷ್ಟ್ರಕಾರ್ಯಾಲಯಗಳು ಹಾಗೂ ಗುಜರಾಥದ ಬೇರೆ ಹಲವು ಸಂಸ್ಥೆಗಳು ಗುಜರಾಥೀ ಭಾಷೆಯಲ್ಲಿ ಸಾವಿರಾರು ಗ್ರಂಥಗಳನ್ನು ಪ್ರಕಟಿಸಿ ಗುಜರಾಥ ಪ್ರಾಂತದ ಸೇವೆಯನ್ನು ಅಮೌಲ್ಯವಾದ ರೀತಿಯಲ್ಲಿ ಜರಗಿಸಿವೆ. ಸಾಬರಮತಿಯ ಸೆರೆಮನೆಯಲ್ಲಿ ಇವೆಲ್ಲ

ಸಂಗತಿಗಳನ್ನು ಕಂಡು ಕೇಳಿದಾಗ ನನಗೆ ಸಾನಂದಾಶ್ಚರ್ಯವಾಯಿತು. ಕರ್ನಾಟಕವಾದರೂ ಇದೇ ರೀತಿಯಲ್ಲಿ ಕಾರ್ಯಮಾಡಬೇಕು; ಕರ್ನಾಟಕದಲ್ಲಿ ಯಾರಾದರೂ ಈ ಕಾರ್ಯವನ್ನು ಕೈಕೊಂಡರೆ ನಾನು ಅವರಿಗೆ ನೆರವಾಗ ಬೇಕು; ಎಂಬದಾಗಿ ಆ ಹೊತ್ತಿನಲ್ಲಿ ನನ್ನಷ್ಟಕ್ಕೇ ನಾನು ಅಂದುಕೊಂಡೆನು.

ನಾನು ಸೆರೆಮನೆಯಲ್ಲಿರುವಾಗ ಕರ್ನಾಟಕದಲ್ಲಿ ಈ ತರದ ಪ್ರಯತ್ನ ಗಳು ವಿಶೇಷವಾಗಿ ನಡೆದಿರುವದನ್ನು ಕಂಡು ನನಗೆ ಅತ್ಯಂತ ಸಂತೋಷ ವಾಯಿತು. ಒಳ್ಳೆ ಉಪಯುಕ್ತವಾಗಿರುವ ಈ ಪುಸ್ತಕಕ್ಕೆ ಮುನ್ನುಡಿಯನ್ನು ಬರೆಯುವ ಬಗ್ಗೆ ನನ್ನನ್ನು ಕೇಳಿದ ಕೂಡಲೆ ನಾನು ಸಂತೋಷದಿಂದ ಒಪ್ಪಿ ಕೊಂಡೆನು. ಬೆಳಗಾವಿಯ ಕರ್ನಾಟಕ ಸಾಹಿತ್ಯಸೇವಾಮಂಡಲದ ನನ್ನ ತರುಣಮಿತ್ರರು ಮಾಡುತ್ತಿರುವ ಈ ಕಾರ್ಯವು ಉತ್ತಮವಾದುದೆಂದೂ ನನ್ನ ಕೈಲಾದಮಟ್ಟಿಗೆ ಅವರಿಗೆ ನೆರೆವಾಗುವದು ನನ್ನ ಕರ್ತವ್ಯವೆಂದೂ ನನಗೆ ತೋರಿತು.

ಬುದ್ಧ, ಕ್ರಿಸ್ತ, ಕನ್‌ಫ್ಯೂಶಿಯಸ' ಮತ್ತು ಬೇರೆ ಜಗದ್ಗುರುಗಳ ಪಂಕ್ತಿ ಯಲ್ಲಿಯೇ ಗಾಂಧಿಯವರನ್ನೂ ಕುಳ್ಳಿರಿಸಬಹುದಾಗಿದೆ. ಈ ಜಗದ್ಗುರುಗಳ ಮಾಲಿಕೆಯಲ್ಲಿ ಗಾಂಧಿಯವರೇ ಶ್ರೇಷ್ಠತಮರೆಂದು ನನ್ನ ಅಭಿಪ್ರಾಯ. ಗಾಂಧಿಯವರು ಸೂರ್ಯನಂತೆ ತೇಜಸ್ವಿಗಳೂ ಚಂದ್ರನಂತೆ ಶಾಂತರೂ ಆಗಿ ದ್ದಾರೆ. ಕಳೆದ ಇಪ್ಪತ್ತೈದು ಶತಮಾನಗಳಲ್ಲಿ ಜಗತ್ತಿನಲ್ಲಾಗಿ ಹೋದ ಚಿತ್ತವೇಧಕ ವ್ಯಕ್ತಿಗಳಲ್ಲಿ ಗಾಂಧಿಯವರು ಸರ್ವಶ್ರೇಷ್ಠರಾಗಿದ್ದಾರೆ. ಗಾಂಧಿ ಯವರು ಬರೀ ಭಾರತೀಯರಿಗಷ್ಟೇ ಅಲ್ಲದೆ ಇಡಿಯ ಮಾನವ ಸಮಾಜಕ್ಕೆ ಧ್ರುವನಕ್ಷತ್ರದಂತೆ ಮಾರ್ಗದರ್ಶಕರಾಗಿದ್ದಾರೆ. ಗಾಂಧಿಯವರು ಹಿಂದುಸ್ಥಾ ನದ ಧೀರೋದಾತ್ತ ಮುಖಂಡರು. ಗಾಂಧಿಯವರು ಶ್ರೇಷ್ಠತರಗತಿಯ ಸಾಧು ಪುರುಷರು. ಗಾಂಧಿಯವರೇ ನಮಗೆ ಪ್ರಕಾಶವನ್ನೀಯುವಂಥವರು. ನಮ್ಮ ಸರ್ವಸ್ವವೆಂದರೆ ಗಾಂಧಿಯವರು.

ಗಾಂಧಿಯವರ ಜೀವನಚರಿತ್ರವೆಂದರೆ ಕನ್ನಡಿಯಂತಿದೆ. ಅದನ್ನು ಎಲ್ಲರೆದುರಿಗಿರಿಸುವದು ಅವಶ್ಯ. ಪ್ರತಿಯೊಬ್ಬರು ಇದನ್ನು ಓದಬೇಕಲ್ಲದೆ ಇದಕ್ಕ ನುಗುಣವಾದ ಆಚರಣೆಯನ್ನೂ ಇಡಬೇಕು. ಕಿರಿಯರು, ಹಿರಿಯರು, ಗಂಡ ಸರು, ಹೆಂಗಸರು, ಹುಡುಗರು, ಹುಡುಗೆಯರು, ಎಲ್ಲರೂ ಗಾಂಧಿಯವರ

ಚರಿತ್ರವನ್ನು ಚೆನ್ನಾಗಿ ಅಭ್ಯಾಸ ಮಾಡಬೇಕು. ಈ ಚರಿತ್ರವೆಂದರೆ ನಮಗೆ ಗೀತೆಯಂತಾಗಬೇಕು.

ಬೆಳಗಾವಿಯ ಕರ್ನಾಟಕ ಸಾಹಿತ್ಯ ಸೇವಾಮಂಡಲದವರು ಗಾಂಧಿ ಯವರ ಜೀವನ ಚರಿತ್ರೆಯನ್ನು ಇಷ್ಟೊಂದು ಸೊಗಸಾದ ಭಾಷೆಯಲ್ಲಿ ಬರೆದು ನಮ್ಮ ನಾಡಿನ ಮಕ್ಕಳಿಗೆ ಇದು ಸುಲಭವಾಗಿ ದೊರೆಯುವಂತೆ ಮಾಡಿರು ವುದಕ್ಕಾಗಿ ನನಗೆ ತುಂಬಾ ಸಂತೋಷವಾಗಿದೆ. ಈ ಕಾರ್ಯದಿಂದ ಮಂಡಲ ದವರು ಕರ್ನಾಟಕ ಪ್ರಾಂತಕ್ಕೆ ಅಮೌಲ್ಯವಾದ ಸೇವೆಯನ್ನು ಮಾಡಿದ್ದಾರೆ. ಈ ಪ್ರಯತ್ನಕ್ಕಾಗಿ ಮಂಡಲವನ್ನು ಅಭಿವಂದಿಸುವದು ನನ್ನ ಕರ್ತವ್ಯವೆಂದು ನನಗೆ ತೋರುತ್ತದೆ.

ಮಂಡಲದವರು ಬೇರೆ ಬೇರೆ ಮುಖಂಡರ ಚರಿತ್ರೆಗಳನ್ನು ಬಹಳವಾಗಿ ಪ್ರಕಟಿಸಿ ಅವುಗಳನ್ನು ಆದಷ್ಟು ಅಗ್ಗವಾದ ಬೆಲೆಗೆ ಮಾರುವ ವ್ಯವಸ್ಥೆ ಮಾಡ ಬೇಕೆಂದು ಇದೇ ಸಂದರ್ಭದಲ್ಲಿ ನಾನು ಅವರಿಗೆ ಆಗ್ರಹಪೂರ್ವಕವಾಗಿ ಸೂಚಿಸಬೇಕೆನ್ನುವೆನು. ನಮ್ಮ ದೇಶದ ವಿಭೂತಿಗಳ ಚರಿತ್ರೆಗಳನ್ನೂ ಜಗ ತ್ತಿನ ಮಹಾಪುರುಷರ ಚರಿತ್ರೆಗಳನ್ನೂ ಬರೆದು ಪ್ರಕಟಿಸಿ ಅವುಗಳ ಪ್ರಚಾರ ವನ್ನು ಎಲ್ಲೆಲ್ಲಿಯೂ ಮಾಡಿಬಿಡಬೇಕು. ಕರ್ನಾಟಕದಲ್ಲಿ ಗಾಂಧಿಗಳನ್ನು ಹುಟ್ಟಿಸುವ ಕಾರ್ಯಕ್ಕೆ ಇದರಿಂದ ಸಹಾಯವಾಗುವದಲ್ಲದೆ ಇದಕ್ಕೂ ಹೆಚ್ಚಿನ ಕಾರ್ಯವನ್ನು ಮಾಡುವಂತೆ ನಮ್ಮ ಜನರಲ್ಲಿ ವಿದ್ಯುತ್ಸಂಚಾರವಾಗುವದು. ಜೀವನದ ಒಂದು ವಿಶಿಷ್ಟವಾದ ಉದ್ದೇಶದ ವಿಷಯಕ್ಕೆ ಜನರಲ್ಲಿ ಐಕ್ಯವುಂಟಾ ಗಲು ಈ ಕಾರ್ಯದಿಂದ ಸಹಾಯವಾಗುವದು. ಮಂಡಲದವರು ನನ್ನ ಸೂಚನೆಯನ್ನು ಮನ್ನಿಸಿ ಇದರಂತೆ ಕಾರ್ಯ ಮಾಡುವರೆಂದು ನಾನು ಹಾರೈಸುತ್ತೇನೆ.

**ಕನ್ನಡ ನಾಡಿನ ಚಿಕ್ಕಮಕ್ಕಳೆ! ಈ ಚರಿತ್ರೆಯನ್ನು ಚಿತ್ತ ಗೊಟ್ಟು ಓದಿ ಗಾಂಧಿಯವರು ಹೇಳುವ ಮತ್ತು ಮಾಡುವ ವಿಷಯ ಗಳನ್ನೆಲ್ಲ ಚೆನ್ನಾಗಿ ತಿಳಿದುಕೊಳ್ಳುವ ಯತ್ನ ಮಾಡಿರಿ. ಇದರಲ್ಲಿಯೇ ಕರ್ನಾಟಕದ ಮೋಕ್ಷವಿದೆ. ಗಾಂಧಿಯವರೂ ಅವರ ಸಹಕಾರಿಗಳೂ ನಿಮಗಾಗಿಯೂ ನಿಮ್ಮ ತಾಯಿ ನಾಡಿನ ಸಲುವಾಗಿಯೂ ಏನೇನು**

**ಮಾಡಿರುವವರು ಮತ್ತು ಮಾಡುತ್ತಿರುವವರೆಂಬದು ನಿಮಗೆ ಗೊತ್ತಿರಬೇಕು. ಹೀಗಾದರೆ ಮಾತ್ರ, ಕಳೆದ ಐವತ್ತು ವರ್ಷಗಳಿಂದ ದೇಶದಲ್ಲಿ ನಡೆದಿರುವ ಸ್ವಾಂತ್ರ್ಯಸಂಗ್ರಾಮದಲ್ಲಿ ನಿಮ್ಮ ಪಾಲಿನ ಕಾರ್ಯವನ್ನು ಮಾಡಲು ನಿಮಗೆ ಶಕ್ಯವಾಗುವದು. ಕನ್ನಡನಾಡಿನ ಹುಡುಗ ಹುಡುಗೆಯರೆ! ಶಾಂತಿಸೈನಿಕರಾಗಿ ಜಗತ್ತಿನಲ್ಲಿ ಮುಂದೆ ಸಾಗಿರಿ. ಗಾಂಧಿಯವರು ನಿಮಗಿತ್ತಿರುವ ಬೆಳಕನ್ನು ಎಲ್ಲರಿಗೂ ಮುಟ್ಟಿಸಿರಿ. ನೀವೆ ಪ್ರಕಾಶಮಯರಾಗಿ ಭಾರತವರ್ಷವನ್ನಾವರಿಸಿರುವ ಕತ್ತಲೆಯನ್ನು ದೂರ ಮಾಡಿರಿ.**

**ನಾ. ಸು. ಹರಡೀಕರ.**

---

## ಪ್ರಕಾಶಕರ ಮುನ್ನುಡಿ.

ನಾವು ಕಳೆದ ವರುಷ ಪ್ರಕಟಿಸಿದ ಬಹುಮಾನದ ಪುಷ್ಪವಾದ **ವೀರವಲ್ಲಭಭಾಯಿ** ಚರಿತ್ರೆಯು ಇಷ್ಟರಲ್ಲಿಯೇ ಕನ್ನಡಿಗರ ಮನ್ನಣೆಗೆ ಪಾತ್ರವಾಗಿದೆ. ಅದರಂತೆಯೆ **ಮಹಾತ್ಮರ ೭೫ ನೆಯ ಹುಟ್ಟಿದ ದಿವಸ** ಅವರ ಈ ಚರಿತ್ರೆಯನ್ನು ಕನ್ನಡನಾಡಿನ ಚಿಕ್ಕ ಮಕ್ಕಳಿಗಾಗಿ ಪ್ರಕಟಿಸಿದೆ. ಅದು ಅವರ ಮನ್ನಣೆಗೆ ಪಾತ್ರವಾಗುವದೆಂದು ನಂಬಿಗೆ.

ಈ ಪುಸ್ತಕವನ್ನು ಪ್ರಕಟಿಸಲು ಸಹಾಯ ಮಾಡಿದವರಿಗೆಲ್ಲ ನಮ್ಮ ಅಭಿವಂದನೆಗಳು. ತಮ್ಮ ಅನೇಕ ಕಾರ್ಯಗಳನ್ನು ಬದಿಗೊತ್ತಿ ಸ್ವಲ್ಪಾವಧಿಯಲ್ಲಿಯೇ ಈ ಪುಸ್ತಕಕ್ಕೆ ಮುನ್ನುಡಿ ಬರೆದು ಕೊಟ್ಟದುಕಾಗಿ **ಡಾ. ಹರಡೀಕರರಿಗೆ** ನಾವು ತುಂಬಾ ಋಣಿಯಾಗಿರುವೆವು.

**ಪ್ಯಾಟಿ ಶಾಮರಾಯರು.**

# ಮಹಾತ್ಮಾ ಗಾಂಧಿ.

## ೧. ಮಹಾತ್ಮಾ ಗಾಂಧೀ ಮಹಾರಾಜಕೀ ಜಯ!

ಎನ್ನಿರಿ, ಇನ್ನೊಮ್ಮೆ ಎನ್ನಿರಿ! ಏನು ಎಂದಿರಿ? "ಮಹಾತ್ಮಾ ಗಾಂಧೀ ಮಹಾರಾಜಕೀ ಜಯ!" ನೋಡಿರುವಿರೇನು ಗಾಂಧಿಯವರನ್ನು? ಗಾಂಧಿಯವರನ್ನು ಎಲ್ಲರೂ ನೋಡಿರಲಿಕ್ಕಿಲ್ಲ. ಅವರ ಫೋಟೊ? ಅದು ಎಲ್ಲರಿಗೂ ಗೊತ್ತು. ಅವರ ಫೋಟೊ ನೋಡಿದ ಕೂಡಲೆ ಎಲ್ಲರೂ ಹೇಳಬಹುದು, 'ಇದು ಗಾಂಧಿಯವರದು. ಎಂದು. ಗಾಂಧಿಯವರೆಂದರೆ ಎಲ್ಲರಿಗೂ ಪ್ರೀತಿ. ಅದಕಾಗಿಯೆ ಮೇಲಿಂದಮೇಲೆ ಎನ್ನುವರು; ಏನದು? ಎನ್ನಿರಿ ನೋಡ್ಪೋಣ! "ಮಹಾತ್ಮಾ ಗಾಂಧೀ ಮಹಾರಾಜಕೀ ಜಯ!"

ಇದು ಯಾಕೆ? 'ಗಾಂಧಿ' ಎಂದ ಕೂಡಲೆ ಇಷ್ಟು ಅಕ್ಕರತೆ ಯಾಕೆ? ಇಷ್ಟು ಅಭಿಮಾನ ಯಾಕೆ? ಅವರ ಹೆಸರಿನಿಂದ ಜಯಜಯ್ಯುಕಾರ ಯಾಕೆ?

ಯಾಕೆಂಧರೆ ಅವರು ಮಹಾತ್ಮರು; ಮಹಾತ್ಮಾ ಗಾಂಧಿ. ಮಹಾತ್ಮರೆಂಧರೆ ಎಲ್ಲರಿಗೂ ಪ್ರೀತಿ; ಮಹಾತ್ಮರ ಹೆಸರು ಎಲ್ಲರಿಗೂ ಪ್ರಿಯುವಾಧದ್ದು. ಎಲ್ಲರೂ ಅವರ ಹೆಸರಿನಿಂಧ ಜಯಜಯ್ಯುಕಾರ ನಾಡುವರು. 'ಗಾಂಧಿ' ಎಂಬುದು ಅವರ ಮನೆತನದ ಹೆಸರು. ಅವರ

ಹೆಸರು ಮೋಹನದಾಸ. ಅವರ ತಂದೆಯ ಹೆಸರು ಕರಮಚಂದ. ಮಾಡಿರಿ, ಇನ್ನೊಮ್ಮೆ ಜಯಜಯಕಾರ ಮಾಡಿರಿ! ಮಹಾತ್ಮಾ ಗಾಂಧೀ ಮಹಾರಾಜಕೀ ಜಯ! ಮಹಾತ್ಮಾ ಮೋಹನದಾಸ ಕರಮಚಂದ ಗಾಂಧೀ ಮಹಾರಾಜಕೀ ಜಯ!!

---

## ೨. ಮಹಾತ್ಮಾ ಗಾಂಧಿ.

ಗಾಂಧಿಯವರಿಗೆ 'ಮಹಾತ್ಮರು' ಎಂದು ಯಾಕೆ ಎನ್ನುವರು? ಅವರು ಎರಡನೆಯವರಿಗಾಗುವ ದುಃಖವು ತಮಗೆ ಆದಂತೆಯೇ ತಿಳಿಯುವರು. ತಾವಾಗಿ ಒಬ್ಬರಿಗೆ ಕಷ್ಟ ಕೊಡುವದಿಲ್ಲ. ಒಬ್ಬರ ಮನಸು ನೋಯುವಂಥ ಮಾತು ಆಡುವದಿಲ್ಲ. ಕಷ್ಟಬಡುವವರನ್ನು ನೋಡಿದರೆ ಬಹಳ ಮರುಗುವರು. ಕಷ್ಟಬಡುವವರಿಗಿಂತಲೂ ಹೆಚ್ಚು ದುಃಖವು ಅವರಿಗಾಗುವದು. ಎರಡನೆಯವರ ದುಃಖವನ್ನು ದೂರಮಾಡುವದಕ್ಕಾಗಿ ಬಹಳ ಪ್ರಯತ್ನ ಮಾಡುವರು. ಯಾರೊಬ್ಬರನ್ನು ದ್ವೇಷಿಸುವದಿಲ್ಲ. ತಮಗೆ ಕಷ್ಟಪಡಿಸಿದವರನ್ನೂ ಅವರು ಪ್ರೀತಿಸುವರು. ಅಲ್ಲದ ಕೆಲಸ ಮಾಡಿದವರ ಮೇಲೆಯೂ ಅವರು ಸಿಟ್ಟಿಗೇಳುವದಿಲ್ಲ. ಒಳ್ಳೆಯ ಮಾತುಗಳನ್ನು ಹೇಳಿ ಅವರನ್ನು ಹಾದಿಗೆ ತರಲಿಕ್ಕೆ ಯತ್ನಿಸುವರು. ಎಲ್ಲರ ಮೇಲೆಯೂ ಅವರ ಪ್ರೀತಿ. ಅದರಿಂದಲೇ ಎಲ್ಲರು ಅವರನ್ನು ಪ್ರೀತಿಸುವರು.

ಇಂಥವರಿಗೆಯೆ 'ಮಹಾತ್ಮರು' ಎಂದು ಎನ್ನುವರು. ಏಸು ಕ್ರಿಸ್ತ ಹೀಗೆಯೆ ಇದ್ದ. ಬುದ್ಧ ಹೀಗೆಯೆ ಇದ್ದ. ಅವರೆಲ್ಲರೂ

ಮಹಾತ್ಮರು. ಅವರಂತೆ ಗಾಂಧಿಯವರೂ ಮಹಾತ್ಮರು. ಅದರಿಂದಲೆ ಅವರಿಗೆ ' ಮಹಾತ್ಮಾ ಗಾಂಧಿ ' ಎಂದು ಹೆಸರು.

---

## ೩. ಗಾಂಧಿಯವರ ಉಡುಪು.

ಗಾಂಧಿಯವರ ಉಡುಪು ನೋಡಿದಿರಾ ? ಅವರ ಮೈಮೇಲೆ ಇರುವದೆಂದರೆ ಮೂರು ನಾಲ್ಕು ಮೊಳ ಉದ್ದವಾದ ಒಂದೇ ಒಂದು ನಡುಸುತ್ತು; ಲುಂಗಿ. ಹೀಗೆ ಯಾಕೆ ? ಮೈಮೇಲೆ ಅರಿವೆ ಮಾಡಿಕೊಳ್ಳಲಿಕ್ಕೆ ಹಣ ದೊರೆಯುವದಿಲ್ಲವೇನು ಅವರಿಗೆ ?

ದೊರೆಯುತ್ತದೆ. ಗಾಂಧಿಯವರ ಮುಂದೆ ಜನರು ರೂಪಾಯಿಯ ಸುರಿಮಳೆ ಮಾಡುವರು. ಅವರು ಹೋದಲ್ಲಿ ಹೆಂಗಸರು ತಮ್ಮ ಮೈಮೇಲಿನ ಆಭರಣಗಳನ್ನು ತೆಗೆದು ಕೊಡುವರು. ಆದರೆ ಗಾಂಧಿಯವರು ಅದರಲ್ಲಿಯ ಒಂದು ಕಾಸು ಸಹ ತಮಗಾಗಿ ವೆಚ್ಚ ಮಾಡುವದಿಲ್ಲ. ಅದನ್ನು ದೇಶಹಿತದ ಕೆಲಸಗಳಿಗಾಗಿಯೇ ಉಪಯೋಗಿಸುವರು.

ಗಾಂಧಿಯವರು ದೊಡ್ಡ ವಕೀಲರು. ವಿಲಾಯತಿಗೆ ಹೋಗಿ ವಕೀಲಿಯ ಪರೀಕ್ಷೆ ಕೊಟ್ಟು ಬಂದಿದ್ದಾರೆ. ಇಂಥ ಪರೀಕ್ಷೆ ಕೊಟ್ಟು ಬಂದ ವಕೀಲರಿಗೆ ಬ್ಯಾರಿಸ್ಟರರು ಎಂದು ಹೆಸರು. ಗಾಂಧಿಯವರು ಬ್ಯಾರಿಸ್ಟರರು. ಅವರು ವಕೀಲಿಯಿಂದ ಬೇಕಾದಷ್ಟು ಹಣ ಗಳಿಸಬಹುದು. ಇಂಥವರ ಮೈಮೇಲೆ ಲುಂಗಿ ಮಾತ್ರ ಯಾಕೆ ಇರಬೇಕು ?

ವಿಲಾಯತಿಗೆ ಹೋಗಿ ಕಲಿತು ಬಂದವರನ್ನು ನೋಡಿಲ್ಲವೆ? ಅವರ ಮೈಮೇಲೆ ಕೋಟು, ಪಾಟ್ಲೂನು, ಕೊರಳೊಳಗೆ ಕಾಲರು, ಕಾಲೊಳಗೆ ಬೂಟು; ಇನ್ನೂ ಏನೇನೋ ಇರುತ್ತವೆ. ಗಾಂಧಿಯವರ ಮೈಮೇಲೆ ಅವು ಒಂದೂ ಇಲ್ಲ. ಯಾಕೆ?

ಇದ್ದವು; ಇವರ ಮೈಮೇಲೆಯೂ ಮೊದಲು ಎಲ್ಲ ಇದ್ದವು. ಆದರೆ ಗಾಂಧಿಯವರು ಅವನ್ನು ತೆಗೆದೊಗೆದರು. ತೀರ ಬಡವರಂತೆ ಒಂದು ಲುಂಗಿಯನ್ನು ಮಾತ್ರ ಸುತ್ತಿಕೊಂಡರು. ಹೀಗೆ ಎಂದಿನಿಂದಾಯಿತು, ಯಾಕೆ ಆಯಿತು; ಗೊತ್ತಿದೆಯೆ?

---

# ೪. ಗಾಂಧಿಯವರ ಉಡುಪು.

## ( ೨ )

ಬ್ಯಾರಿಸ್ಟರ ಗಾಂಧಿಯವರು ಒಂದು ವ್ಯಾಜ್ಯ ನಡಿಸುವದಕ್ಕೆ ದಕ್ಷಿಣ ಆಫ್ರಿಕೆಗೆ ಹೋದರು. ದಕ್ಷಿಣಆಫ್ರಿಕೆ ಎಂಬುದು ನಮ್ಮ ಹಿಂದೂ ದೇಶದಂತೆಯೆ ಒಂದು ದೇಶ. ನಮ್ಮ ದೇಶದ ಪಶ್ಚಿಮಕ್ಕೆ ಸಮುದ್ರದಾಚೆ ದೂರ ಇದೆ. ಆ ದೇಶದಲ್ಲಿ, ನಮ್ಮಲ್ಲಿರುವ ಇಂಗ್ಲಿಷ ಸಾಹೇಬರಂಥ ಜನರು ಇರುವರು. ಆ ಸಾಹೇಬರ ಕೆಲಸ ಮಾಡಲಿಕ್ಕೆ ಕೂಲಿಯವರು ಬೇಕಾದರು. ಆದಕ್ಕಾಗಿ ಅವರು ನಮ್ಮ ಹಿಂದೂ ದೇಶದಿಂದ ಬಡ ಕೂಲಿಕಾರರನ್ನು ಕರೆದುಕೊಂಡು ಹೋದರು. ಕರೆದೊಯ್ಯುವಾಗ "ನಿಮಗೆ ಅಷ್ಟು ಕೂಲಿ ಕೊಡು

ವೆವು, ಇಷ್ಟು ಅನುಕೂಲ ಮಾಡಿಕೊಡುವೆವು. ನೀವು ಅಲ್ಲಿ ಹೊಲ ಮಾಡಿರಿ ಮನೆ ಮಾಡಿರಿ" ಎಂದು ಏನೇನೋ ಹೇಳಿದರು. ಆದರೆ ಅಲ್ಲಿ ಹೋದ ಮೇಲೆ ಅವರನ್ನು ಬಹಳ ಕೆಟ್ಟರೀತಿಯಿಂದ ನಡಿಸಿಕೊಳ್ಳ ಹತ್ತಿದರು. ದಕ್ಷಿಣಆಫ್ರಿಕೆಗೆ ಹೋದಾಗ ಗಾಂಧಿಯವರು ಅದನ್ನೆಲ್ಲ ನೋಡಿದರು. ಅವರಿಗೆ ತಿಳಿಹೇಳಿದರು. ಅವರನ್ನು ಕೂಡಿಕೊಂಡು ಅಲ್ಲಿಯ ಸರಕಾರದ ಕೂಡ ಹೋರಾಡಿದರು. ಆ ಕೂಲಿಯವರು ಕಷ್ಟಬಡುತ್ತಿರುವಾಗ ತಾವು ತಿಂದುಂಡು ಸುಖದಿಂದ ಇರುವದು ಅವರ ಮನಸ್ಸಿಗೆ ಒಪ್ಪಲಿಲ್ಲ. ಆ ಕೂಲಿಕಾರರಂತೆಯೆ ಅನ್ನ ವಸ್ತ್ರಗಳನ್ನು ಉಪಯೋಗಿಸ ತೊಡಗಿದರು. ತಮ್ಮ ಕೋಟು ಪಾಟ್ಲೂನುಗಳನ್ನು ಬೀಸಾಡಿದರು. ಆ ಕೂಲಿಕಾರರಂತೆ ಒಂದು ಚಣ್ಣ, ಒಂದು ಅಂಗಿ ಹಾಕಿಕೊಳ್ಳತೊಡಗಿದರು.

---

# ೫. ಕಾರೇವಾಡ ಉಡುಪು.

## ( ೩ )

ದಕ್ಷಿಣ ಆಫ್ರಿಕೆಯಲ್ಲಿ ಗಾಂಧಿಯವರಿಗೆ ಜಯವಾಯಿತು. ಆ ಮೇಲೆ ಅವರು ನಮ್ಮ ದೇಶಕ್ಕೆ ಮರಳಿ ಬಂದರು. ಇಲ್ಲಿ ಬಂದ ಮೇಲೆ ಯಾವ ತರದ ಬಟ್ಟೆಗಳನ್ನು ಧರಿಸಬೇಕೆಂದು ವಿಚಾರ ಮಾಡಿದರು. ಸಾಹೇಬರಂತೆ ಕೋಟು ಪಾಟ್ಲೂನು ಹಾಕಿಕೊಳ್ಳುವದು ಅವರ ಮನಸ್ಸಿಗೆ ಬರಲಿಲ್ಲ. ದಕ್ಷಿಣ ಆಫ್ರಿಕೆಯಲ್ಲಿ ಇದ್ದಾಗ ಅಲ್ಲಿಯ ಕೂಲಿಕಾರರಂತೆ ಉಡುಪು ಇತ್ತು. ಅದು ಇಲ್ಲಿ ಹೇಗೆ ಸರಿಕಂಡೀತು!

ಇಲ್ಲಿ ಬಂದ ಮೇಲೆ ಇಲ್ಲಿಯ ಜನರಂತೆ ಇರಬೇಕು. ಆದರಿಂದ ಆ ಚಣ್ಣ ಅಂಗಿಗಳನ್ನು ಬಿಟ್ಟರು.

ನಮ್ಮ ಹಿಂದೂದೇಶದಲ್ಲಿ ಎಲ್ಲ ಕಡೆಗೂ ಒಂದೇ ತರದ ಉಡುಪು ಇರುವದಿಲ್ಲ. ನಮ್ಮ ಮೈಮೇಲಿನ ಬಟ್ಟೆಗಳು ಒಂದು ತರಹ; ಮದ್ರಾಸಿನ ಜನರ ಬಟ್ಟೆಗಳು ಮತ್ತೊಂದು ತರಹ; ಮಾರವಾಡಿಗಳ ಬಟ್ಟೆಗಳು ಮಗದೊಂದು ತರಹ; ಪಠಾಣರ ಬಟ್ಟೆಗಳು ಇನ್ನೊಂದು ತರಹ. ಗಾಂಧಿಯವರು ಎಂಥ ಬಟ್ಟೆಗಳನ್ನು ತೊಟ್ಟು ಕೊಂಡರು?

ಅವರು ತಾವು ಹುಟ್ಟಿದ ನಾಡಿನಲ್ಲಿ ಬಳಕೆಯಲ್ಲಿದ್ದಂಥ ಬಟ್ಟೆಗಳನ್ನು ತೊಟ್ಟುಕೊಂಡರು. ಅವರು ಹುಟ್ಟಿದುದು ಎಲ್ಲಿ? ಕಾಠೇವಾಡ ಎನ್ನುವರಲ್ಲ, ಆ ಕಾಠೇವಾಡದಲ್ಲಿಯ ಪೋರಬಂದರ. ಆ ನಾಡಿಗೆ ಗುಜರಾಥ ಎಂದು ಹೆಸರು. ಅಲ್ಲಿ ಗುಜರಾಥಿ ಭಾಷೆ ನಡೆಯುತ್ತದೆ. ಗಾಂಧಿಯವರ ಮಾತೃಭಾಷೆ ಗುಜರಾಥಿ.

ಈಗ ಗಾಂಧಿಯವರ ಮೈಮೇಲೆ ಗುಜರಾಥದ ಜನರ ಉಡುಪು ಬಂದಿತು. ಎಂದರೆ ಎಂಥದು? ಉಡುವದು ದೋತರ, ಮೈಯೊಳಗೆ ಉದ್ದಂಗಿ, ಮೇಲೆ ಒಂದು ಹೊತ್ತುಕೊಳ್ಳುವ ದೋತರ, ತಲೆಗೊಂದು ಮುಂಡಾಸ, ಫೇಟಾ ಎಂದು ಹೆಸರದಕ್ಕೆ ಅಲ್ಲಿ. ತೀರ ಸಾದಾ ಉಡುಪು ಇದು. ಮೈಮೇಲಿನ ಅರಿವೆಗಳೆಲ್ಲ ಬಿಳಿಯವೆ ಇರುತಿದ್ದವು.

# ೬ ಖಾದಿ.

( ೪ )



ಪ್ರತಿಯೊಬ್ಬನು ತನ್ನ ದೇಶದಲ್ಲಿ ಹುಟ್ಟುವ ಒಡವೆಗಳನ್ನೇ ಉಪಯೋಗಿಸಬೇಕು. ದೇಶಾಭಿಮಾನವಿದ್ದವನು ಹೀಗೆಯೆ ಮಾಡುವನು. ಮೈಮೇಲಿನ ಬಟ್ಟೆಗಾಗಿ ಎರಡನೆಯ ದೇಶದವರ ಮೋರೆ ನೋಡುತ್ತಾ ಕುಳಿತುಕೊಳ್ಳಬೇಕೆ? ಎರಡನೆಯ ದೇಶದಿಂದ ಬರುವ ಅರಿವೆಗಳನ್ನೇ ತೊಟ್ಟುಕೊಳ್ಳುವದು ನಾಚಿಕೆಗೇಡು. ಗಾಂಧಿಯವರು ಸ್ವದೇಶಾಭಿಮಾನಿಗಳು. ಅವರು ನಮ್ಮ ದೇಶದಲ್ಲಿಯ ಗಿರಣಿಗಳಲ್ಲಿ ಆದ ಅರಿವೆಯಿಂದಲೇ ತಮ್ಮ ಬಟ್ಟೆಗಳನ್ನು ಮಾಡಿಕೊಳ್ಳುತ್ತಿದ್ದರು.

ಗಾಂಧಿಯವರು ಮೊದಲೇ ಸ್ವಾವಲಂಬಿಗಳು. ಅನ್ನವಸ್ತ್ರಗಳಿಗಾಗಿ ಎರಡನೆಯವರನ್ನು ಅವಲಂಬಿಸಬಾರದೆಂದು ಅವರ ಇಚ್ಛೆ. ಅದಕಾಗಿ ಅವರು ಕೈಮುಗ್ಗದ ಮೇಲೆ ನೆಯ್ಯಲಿಕ್ಕೆ ಕಲಿತರು. ತಾವು ನೆಯ್ದ ಬಟ್ಟೆಗಳನ್ನೇ ತೊಟ್ಟುಕೊಳ್ಳತೊಡಗಿದರು. ಆದರೆ ಗಿರಣಿಯ ಸೂಲನ್ನೇ ತರಬೇಕಾಗುತಿತ್ತು. ಆಗ ಕೈನೂಲು ಅವರಿಗೆ ಎಲ್ಲಿ ದೊರೆಯಬೇಕು?

ಹೀಗೂ ಕೆಲವು ದಿವಸ ಹೋದವು. ಗಾಂಧಿಯವರಿಗೆ ಗಂಗಾಬೇನ ಮುಜುಮದಾರ ಎಂಬವಳ ಪರಿಚಯವಾಯಿತು. ಗಾಂಧಿಯವರು ಆಕೆಯಿಂದ ರಾಟೆಯ ಮೇಲೆ ನೂಲಲಿಕ್ಕೆ ಕಲಿತರು. ಆ ಮೇಲೆ ಕೈಯಿಂದ ನೂಲು ನೂತರು. ಆ ನೂಲಿನಿಂದಲೇ ನೆಯ್ದು ಬಟ್ಟೆಗಳನ್ನು ಮಾಡಿಕೊಳ್ಳಹತ್ತಿದರು.

ನೂಲುವ ಗಿರಣಿಗಳ ಸಾಮಾನುಗಳನ್ನು ಪರದೇಶದಿಂದ ತರಿಸ ಬೇಕಾಗುತ್ತದೆ. ಯಾವದೊಂದು ಸಾಮಾನು ಸ್ವಲ್ಪ ಕೊಂಕಿದರೆ ತೀರಿತು. ಅದು ಬರುವ ವರೆಗೆ ದಾರಿ ಕಾಯಬೇಕು. ರಾಟೆಯು ಹೀಗಲ್ಲ. ಒಂದು ಚೂರು ಹಂಚು, ಒಂದು ಗೇಣು ಕಟ್ಟಿಗೆಗಳಿಂದಲೂ ರಾಟೆಯನ್ನು ( ಕದಿರುಂಡಿಗೆ ) ಮಾಡಿಕೊಳ್ಳಬಹುದು.

ಪ್ರತಿಯೊಬ್ಬನು ರಾಟೆಯಿಂದ ತನಗೆ ಬೇಕಾಗುವಷ್ಟು ಅರಿವೆ ಒದಗಿಸಿಕೊಳ್ಳಬಹುದು. ಹಾಗೆ ಒದಗಿಸಿಕೊಳ್ಳಬೇಕೆಂದೇ ಗಾಂಧಿ ಯವರ ಇಚ್ಛೆ.

ಈಗ ಗಾಂಧಿಯವರ ಮೈಮೇಲೆ ಶುದ್ಧ ಖಾದಿ ಆಯಿತು. ಇಂಥ ಖಾದಿಗೆಯೇ ನಾವು ಕೊಡೆಯರಿವೆ ಎನ್ನುತ್ತೇವೆ. ‘ ಕೊಡೆಯರಿವೆ ’ ಎಂದರೆ ಬಿಸಿಲು ಮಳೆ ಹತ್ತಬಾರದೆಂದು ಹಿಡಿ ಯುವ ಕೊಡೆಯ ಕರಿ ಅರಿವೆಯಲ್ಲ. ರಾಟೆಯ ಮೇಲೆ ನೂತು ಕೈಮಗ್ಗದ ಮೇಲೆ ನೆಯ್ದ ಅರಿವೆ ಕೊಡೆಯರಿವೆ.

# ೭. ಗಾಂಧೀ ಟೊಪ್ಪಿಗೆ.

ಗಾಂಧಿಯವರು ಕೊಡೆ ಅರಿವೆಯನ್ನು ಉಪಯೋಗಿಸ ತೊಡಗಿದರೆಂದು ಹೇಳಿತಷ್ಟೆ; ಹೀಗಿದ್ದರೂ ಮೊದಲಿನಂತೆ ಅವರ ಮೈಮೇಲೆ ಎಲ್ಲ ಬಟ್ಟೆಗಳು ಇದ್ದವು. ಆದರೆ ಒಂದು ಪ್ರಸಂಗದಲ್ಲಿ ಅವರ ಈ ಉಡುಪಿನಲ್ಲಿಯೂ ಬದಲಾಯಿತು.

ಗಿರಣಿಗಳ ಯಜಮಾನರು ಕೂಲಿಕಾರರ ಹಿತದ ಬಗ್ಗೆ ಎಷ್ಟು ಎಚ್ಚರ ಪಡಬೇಕೋ ಅಷ್ಟು ಎಚ್ಚರ ಪಡುತ್ತಿರುವದಿಲ್ಲ. ಕೂಲಿಕಾರರ ನ್ಯಾಯುವಾದ ಬೇಡಿಕೆಗಳನ್ನು ಪೂರೈಸುವದಿಲ್ಲ. ಇಂಥ ಪ್ರಸಂಗದಲ್ಲಿ ಕೂಲಿಕಾರರು ಕಟ್ಟು ( ಸಂಪು ) ಮಾಡುವರು. ಎಂದರೆ ಕೆಲಸಕ್ಕೆ ಹೋಗುವದನ್ನು ಬಿಡುವರು. ಅಹಮದಾಬಾದದ ಗಿರಣಿಯ ಕೂಲಿ ಕಾರರೂ ಒಮ್ಮೆ ಹೀಗೆ ಕಟ್ಟು ಮಾಡಿದ್ದರು.

ಆಗ ಕೂಲಿಕಾರರ ಹೊಟ್ಟೆ ಬಟ್ಟೆಗಳಿಗೆ ಜನರು ಹಣ ಕಾಸು ಕೂಡಿಸಿ ಕೊಟ್ಟರು. ಕಟ್ಟು, ತಿಂಗಳು ಎರಡು ತಿಂಗಳಾದರೂ ಮುಗಿ ಯಲಿಲ್ಲ. ಗಿರಣಿಯ ಯಜಮಾನರು ಕೂಲಿಯವರ ಬೇಡಿಕೆ ಪೂರೈಸ ಲಿಲ್ಲ. ಕೂಲಿಕಾರರಿಗೆ ಹೊಟ್ಟೆತುಂಬ ಕೂಳು ಸಿಗದಂತಾಯಿತು. ಕೂಲಿಯ ಜನರು ನಿರುತ್ಸಾಹಿಗಳಾದರು. ಆಗ ಗಾಂಧಿಯವರು ಅವರ ಸಹಾಯಕ್ಕೆ ಹೋದರು. ಅವರಿಗೆ ದಿನಾಲು ಉಪದೇಶ ಮಾಡತೊಡಗಿದರು. ಅದರಿಂದ ಕೂಲಿಕಾರರಿಗೂ ಹುರುಪು ಬಂತು.

" ಹೊಟ್ಟೆಗಿಲ್ಲದೆ ಸತ್ತರೂ ಸಾಯಲಿ, ನಮ್ಮ ಬೇಡಿಕೆ ಪೂರ್ಣ ಮಾಡದೆ ಕೆಲಸದ ಮೇಲೆ ಹೋಗಲಿಕ್ಕಿಲ್ಲ " ಎಂದು ಅವರು ನಿಶ್ಚಯ ಮಾಡಿದರು.

ಕೂಲಿಕಾರರ ಮೈಮೇಲ ಸಾಕಷ್ಟು ಬಟ್ಟೆ ಇದ್ದಿಲ್ಲ. ಗಾಂಧಿಯವರು ವಿಚಾರ ಮಾಡಿದರು, " ಪಾಪ! ಇವರಿಗೆ ಸಾಕಷ್ಟು ಅರಿವೆ ದೊರೆಯದಿರುವಾಗ ನನ್ನ ಮೈಮೇಲೆ ಹೊರೆಗೆಹೊರೆ 'ಬಟ್ಟೆಯಿರ ಬೇಕೆ? ನನ್ನ ಮುಂಡಾಸದಲ್ಲಿ ಹತ್ತು ಜನರ ತಲೆ ಮುಚ್ಚಬಹುದಲ್ಲ! " ಎಂದು. ಅಂದಿನಿಂದ ತಲೆಯ ಮೇಲಿನ ಮುಂಡಾಸವನ್ನು ಬೀಸಾಡಿದರು. ಒಂದು ಗೇಣು ಅರಿವೆಯಲ್ಲಿಯೇ ಆಗುವ ಟೊಪ್ಪಿಗೆ ಹಾಕಿಕೊಳ್ಳ ತೊಡಗಿದರು. ನಿಲುವಂಗಿಯನ್ನು ಬಿಟ್ಟು ಗಿಡ್ಡ ಪೈರಣವನ್ನು ತೊಡ ಹತ್ತಿದರು.

ಈ ಗೇಣು ಅರಿವೆಯ ಬಿಳಿ ಟೊಪ್ಪಿಗೆಯನ್ನು ಗಾಂಧಿಯವರೇ ಬಳಕೆಯಲ್ಲಿ ತಂದರು. ಅದರಿಂದ ಅದಕ್ಕೆ ಗಾಂಧೀ ಟೊಪ್ಪಿಗೆ ಎಂದೇ ಹೆಸರು ಬಂದಿತು. ಮೊದಲು ಮೊದಲು ಗಾಂಧಿಯವರ ಆ ಟೊಪ್ಪಿಗೆ ನೋಡಿ ಜನರು ನಗುತಿದ್ದರು. ಆದರೆ ಈಗ ಬಹು ಜನರು ಪ್ರೀತಿಯಿಂದ ಅದನ್ನು ಹಾಕಿಕೊಳ್ಳುವರು. ಈ ಗಾಂಧಿ ಟೊಪ್ಪಿಗೆ ಹಾಕಿಕೊಳ್ಳುವದರ ಸಲುವಾಗಿ ಎಷ್ಟೋ ಜನರು ಕಷ್ಟವನ್ನು ಸಹ ಸಹಿಸಿರುವರು.

# ೮. ನಡುಸುತ್ತು.

ಗಾಂಧಿಯವರು ಒಮ್ಮೆ ಉತ್ಕಲ ಪ್ರಾಂತಕ್ಕೆ ಹೋಗಿದ್ದರು. ಅದು ಬಹಳ ಬಡ ಪ್ರಾಂತ. ಜಗತ್ತಿನಲ್ಲಿ ಬಡದೇಶವೆಂದರೆ ನಮ್ಮ ಹಿಂದುಸ್ಥಾನ; ಉತ್ಕಲಪ್ರಾಂತವು ನಮ್ಮ ದೇಶದಲ್ಲಿ ಬಡ ತನಕ್ಕೆ ಹೆಸರಾದುದು. ಬರಗಾಲವು ಆ ದೇಶದಲ್ಲಿ ಮನೆಮಾಡಿ ಕೊಂಡಿದೆ. ಅಲ್ಲಿಯ ಬಹು ಜನರಿಗೆ ಹೊಟ್ಟೆತುಂಬ ಕೂಳಿಲ್ಲ, ಮೈತುಂಬ ಅರಿವೆಯಿಲ್ಲ. ಎಲುವಿನ ಮನುಷ್ಯನನ್ನು (ಅಸ್ಥಿಪಂಜರ) ನೋಡಿದಂತಾಗುತ್ತದೆ ಅಲ್ಲಿಯ ಜನರನ್ನು ನೋಡಿದರೆ.

ಊರ ಹೊರಗಿನ ಮುರುಕು ಗುಡಿಸಲು. ಆ ಗುಡಿಸಲಿನಲ್ಲಿ ಇರುವವಳು ಒಬ್ಬಳೇ ಮುದುಕಿ. ಪಾಪ! ಹಸಿವೆಯಿಂದ ಬಳಲುತಿದ್ದಳು. ಆಕೆ ಉಟ್ಟುದು ಒಂದು ಮಾಸಿದ ಕೋರಿ. ಎತ್ತ ನೋಡಿದರೂ ಹರುಕು. ಹಾಗೆ ಹೀಗೆ ಮಾಡಿ ನಡುಸುತ್ತು ಮಾತ್ರ ಸುತ್ತಿಕೊಂಡಿದ್ದಳು. ಮೈಮೇಲೆ ಸೆರಗು ತೆಗೆದುಕೊಳ್ಳುವ ಹಾಗೆಯೂ ಇದ್ದಿಲ್ಲ.

ಗಾಂಧಿಯವರು ಆಕೆಯನ್ನು ನೋಡಿದರು. ಬಹಳ ಕಳವಳವಾಯಿತು. "ದೇವರೇ ನನ್ನ ದೇಶದಲ್ಲಿ ಇಷ್ಟು ಬಡತನವೆ! ಇದನ್ನು ದೂರ ಮಾಡಲು ಶಕ್ಯವಿಲ್ಲವೆ!" ಎಂದು ನಿಟ್ಟುಸಿರು ಬಿಟ್ಟರು. ದಿಮ್ಮಗೆ ಕೆಲಹೊತ್ತು ನಿಂತರು.

ಗಾಂಧಿಯವರ ಮನದಲ್ಲಿ ಮತ್ತೊಂದು ವಿಚಾರವು ಇಣಕಿ ಹಾಕಿತು, "ಅರಿವೆ ಹರುಕು ಇದ್ದರೆ ಇರಲಿ, ಇಷ್ಟು ಹೊಲಸು ಯಾಕೆ

ಇರಬೇಕು? ಒಗೆದು ಸ್ವಚ್ಛ ಮಾಡಿಕೊಂಡರೆ ಆಗುವದಿಲ್ಲವೆ?" ಅವರು ಆ ಮುದುಕೆಯನ್ನು ಕೇಳಿದರು, "ಅಮ್ಮ, ಸೀರೆಯನ್ನು ಒಗೆದು ಸ್ವಚ್ಛ ಮಾಡಿಕೊಳ್ಳಬಾರದೆ? ಅದಕ್ಕೂ ಬೇಸರವೆ?"

ಮುದುಕೆ ಕೆಳಗೆ ಮೋರೆ ಹಾಕಿದಳು. "ಬಾಪೂಜಿ, ಏನು ಮಾಡಲಿ, ಮತ್ತೊಂದು ಚಿಂದಿಯಾದರೂ ಇದ್ದರಲ್ಲವೆ ಇದನ್ನು ಒಗೆದು ಹಾಕುವದು?" ಎಂದಳು. ಜನರು ಗಾಂಧಿಯವರನ್ನು ಬಾಪೂಜಿ ಎಂದು ಕರೆಯುವರು.

ಗಾಂಧಿಯವರ ಎದೆಗೆ ಬರೆ ಕೊಟ್ಟಂತಾಯಿತು. ಕಣ್ಣಿನಿಂದ ದಳದಳ ನೀರು ಸುರಿಯಹತ್ತಿತು. ಕುತ್ತಿಗೆಯು ಬಿಗಿದು ಬಂತು. ಬಾಯಿಂದ ಮಾತುಗಳೇ ಹೊರಡಲಿಲ್ಲ. ಇಷ್ಟೊಂದು ಬಡತನವು ನಮ್ಮ ದೇಶಕ್ಕೆ ಯಾಕೆ ಬಂತೆಂದು ವಿಚಾರಿಸತೊಡಗಿದರು. "ಇದೆಲ್ಲವೂ ನಮ್ಮ ದೇಶದಲ್ಲಿ ನಮ್ಮ ಹಿತ ಬಯಸುವಂಥವರು ಇಲ್ಲದುದರ ಪರಿಣಾಮ. ಇದನ್ನು ನಿವಾರಿಸುವದಕ್ಕೆ ಸ್ವರಾಜ್ಯವಲ್ಲದೆ ಬೇರೊಂದು ಉಪಾಯವೇ ಇಲ್ಲ" ಎಂದು ಅವರ ಮನವರಿಕೆ ಆಯಿತು. ಅಲ್ಲಿಯೇ ಪ್ರತಿಜ್ಞೆ ಮಾಡಿದರು, "ಸ್ವರಾಜ್ಯ ದೊರೆತು ನಮ್ಮ ಭಾರತ ಮಾತೆಗೆ ಮೈಮುಚ್ಚುವಷ್ಟು ಅರಿವೆ ಸಿಕ್ಕಲ್ಲದೆ ನಾನು ಈಗಿನಂತೆ ಮೂರು ನಾಲ್ಕು ಬಟ್ಟೆಗಳನ್ನು ಧರಿಸಲಿಕ್ಕಿಲ್ಲ; ಮರ್ಯಾದೆ ಕಾಯ್ದುಕೊಳ್ಳುವಷ್ಟು, ಒಂದು ಲಂಗೋಟಿ ಆದರೆ ಸಾಕು" ಎಂದು.

ಅಂದಿನಿಂದ ಅವರ ಮೈಮೇಲೆ ಇರುವದೆಂದರೆ ಒಂದು ನಡು ಸುತ್ತು ಮಾತ್ರ. ಚಳಿಯಿದ್ದರೆ ಮೈಮೇಲೆ ಹೊದೆಯುವ ಒಂದು ತುಂಡು ಇರುತ್ತದೆ.

---

## ೯. ಗಾಂಧಿಯವರ ಆಹಾರ.

### ೧

ಗಾಂಧಿಯವರು ಗುಜರಾಥ ಪ್ರಾಂತದ ವೈಶ್ಯ ಜಾತಿಯವರು. ಅವರ ತಾಯಿ ಒಳ್ಳೇ ಸಾಧ್ವಿ; ಧರ್ಮಿಷ್ಠಳು. ಅವಳ ಹೆಸರು ಪುತಳೀಬಾಯಿ.

ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಪಾಸಾದ ಮೇಲೆ ಗಾಂಧಿಯವರಿಗೆ ವಿಲಾಯತಿಗೆ ಹೋಗಬೇಕೆಂದು ಮನಸಾಯಿತು. ಆಗ ಅವರ ತಂದೆ ಬದುಕಿ ಇರಲಿಲ್ಲ. ಅವರು ತಾಯಿಯ ಹತ್ತರ ಬಂದು ಕೇಳಿದರು, "ಅಮ್ಮ ವಿಲಾಯತಿಗೆ ಹೋಗಬೇಕೆನ್ನುತ್ತೇನೆ ಹೋಗಲಿಯಾ?" ಎಂದು.

ಪುತಳೀಬಾಯಿಯು ಅದಕ್ಕೆ ಒಪ್ಪಲಿಲ್ಲ. "ವಿಲಾಯತಿಗೆ ಹೋದರೆ ಕುಲಗೆಟ್ಟು ಬಿಡುತ್ತಾರೆ, ಅಲ್ಲಿಗೆ ಹೋದವರು ಮಾಂಸ ತಿನ್ನುತ್ತಾರೆ, ಸೆರೆ ಕುಡಿಯುತ್ತಾರೆ, ಅನೀತಿಯಿಂದ ನಡೆಯುತ್ತಾರೆ; ಬೇಡ ಮಗು." ಎಂದರು.

ಗಾಂಧಿ- "ಅಮ್ಮ, ನಾನು ಎಂದೂ ಹಾಗೆ ಮಾಡಲಿಕ್ಕಿಲ್ಲ, ಅಪ್ಪಣೆ ಕೊಡು."

ಪುತಳೀಬಾಯಿ ಎಂದರು. “ ಮಗೂ, ನಿನ್ನಲ್ಲೇನೋ ನಂಬಿಗೆ ಯಿದೆ. ಆದರೂ ದೂರದೇಶ; ಹೇಗೋ ಏನೋ ಮನಸು ಹಿಂಜರಿಯುತ್ತದೆ. ”

ಗಾಂಧಿಯವರು ಹೇಳಿದರು, “ ಅಮ್ಮ, ಅದರ ವಿಷಯದಲ್ಲಿ ನೀನು ಎಳ್ಳಷ್ಟೂ ಚಿಂತೆ ಮಾಡಬೇಡ. ”

ಪುತಳೀಬಾಯಿಯವರು ತಮ್ಮ ಗುರುಗಳನ್ನು ಕೇಳಿದರು. ಅದಕೆ ಅವರು ಹೇಳಿದರು, “ ನಾನು ಈ ವಿಷಯದಲ್ಲಿ ಅವನಿಂದ ಆಣೆ ಇಡಿಸುತ್ತೇನೆ. ಆ ಮೇಲೆ ಹೋಗಲಿ. ”

ಆ ಜೈನ ಗುರುಗಳು ಬಂದು ಗಾಂಧಿಯವರಿಂದ ಆಣೆ ಮಾಡಿಸಿದರು. ಗಾಂಧಿಯವರು ಆಣೆ ಮಾಡಿದರು, “ ನಾನು ಮಾಂಸ ತಿನ್ನಲಿಕ್ಕಿಲ್ಲ; ಸೆರೆ ಕುಡಿಯಲಿಕ್ಕಿಲ್ಲ; ಅನೀತಿಯಿಂದ ನಡೆಯಲಿಕ್ಕಿಲ್ಲ ” ಎಂದು.

ಆಗ ಗಾಂಧಿಯವರಿಗೆ ವಿಲಾಯತಿಗೆ ಹೋಗಲು ಅಪ್ಪಣೆ ದೊರೆಯಿತು. ಅವರು ತಮ್ಮ ಆಣೆಯನ್ನು ಬಹಳ ಜಾಗರೂಕತೆಯಿಂದ ಪಾಲಿಸಿದರು. ವಿಲಾಯತಿಯಲ್ಲಿ ಮಾಂಸತತ್ತಿಗಳಲ್ಲಿ ಮಾಡಿದ ಆಹಾರ ಪದಾರ್ಥಗಳೇ ಹೆಚ್ಚು. ಗಾಂಧಿಯವರು ಅಂಥ ಪದಾರ್ಥಗಳನ್ನು ಮುಟ್ಟುತಿರಲಿಲ್ಲ. ಗೊತ್ತಿಲ್ಲದೆ ಅಪ್ಪಿದಪ್ಪಿ ತಿನ್ನುವ ಪ್ರಸಂಗ ಬಂದಿದ್ದರೆ ಗೊತ್ತಾದ ಮೇಲೆ ಅದಕಾಗಿ ಪಶ್ಚಾತ್ತಾಪ ಪಡುತಿದ್ದರು. ಒಂದೆರಡು ಸಾರೆ ಹೀಗಾಗಲು ಆಹಾರದ ವಿಷಯದಲ್ಲಿ ಮತ್ತಷ್ಟು ಜಾಗರೂಕರಾದರು. ತಮ್ಮ ಪ್ರತಿಜ್ಞೆಯನ್ನು ಪಾಲಿಸುತ್ತ ಬಂದರು.

---

# ೧೦. ಗಾಂಧಿಯವರ ಆಹಾರ.

೨

ಆಫ್ರಿಕೆಯಲ್ಲಿದ್ದಾಗ ಕಸ್ತೂರಬಾಯಿಗೆ ಬೇನೆಯೊಂದು ಸೇರಿತು. ಕಸ್ತೂರಬಾಯಿಯು ಗಾಂಧಿಯವರ ಹೆಂಡತಿ, ಪತಿವ್ರತೆ. ಗಾಂಧಿಯವರು ಅವಳಿಗೆ ಉಪ್ಪು ಬೇಳೆಗಳನ್ನು ಬಿಡಲಿಕ್ಕೆ ಹೇಳಿದರು. ಅವನ್ನು ಬಿಟ್ಟರೆ ಬೇನೆಯು ನೆಟ್ಟಗಾಗುವದೆಂದು ಗಾಂಧಿಯವರು ತಿಳಿದಿದ್ದರು.

ಉಪ್ಪು ಬೇಳೆಗಳನ್ನು ಬಿಡುವುದು ಸಾಧ್ಯವೆ? ಕಸ್ತೂರಬಾಯಿ ಎಂದಳು, “ ನಿಮಗೆ ಯಾರಾದರೂ ಇವನ್ನು ಬಿಡಲಿಕ್ಕೆ ಹೇಳಿದರೆ ಆಗುವದೆ? ”

ಗಾಂಧಿಯವರು ಆಗಲೆ ಹೇಳಿಬಿಟ್ಟರು, “ ಇದು ನೋಡು, ಇಂದಿನಿಂದ ವರ್ಷದ ವರೆಗೆ ಉಪ್ಪು ಬೇಳೆಗಳನ್ನು ಬಿಟ್ಟು ಬಿಡುತ್ತೇನೆ ” ಎಂದು.

ಹಾಗೆ ವರ್ಷ ಎರಡು ವರ್ಷವಲ್ಲ ಎಷ್ಟೋ ದಿವಸಗಳ ವರೆಗೆ ಬಿಟ್ಟಿದ್ದರು. ಇದಲ್ಲದೆ ಮುಂದೆ ಬೇಯಿಸಿದ ಆಹಾರವನ್ನೂ ಬಿಟ್ಟರು. ಎಮ್ಮೆ ಆಕಳುಗಳನ್ನು ಹಿಂಸಿಸುವದರಿಂದ ಹಾಲು ದೊರೆಯುತ್ತದೆಂದು ಅವನ್ನೂ ಬಿಟ್ಟರು. ಹಣ್ಣುಗಳ ಮೇಲೆ ಮಾತ್ರ ಇರಹತ್ತಿದರು.

ಗಾಂಧಿಯವರು ಒಮ್ಮೆ ಬಹಳ ಅಶಕ್ತರಾದರು. ಅವರಿಗೆ ಡಾಕ್ಟರರು, “ ನೀವು ಹಾಲನ್ನು ತೆಗೆದುಕೊಂಡರೆ ಮಾತ್ರ, ಬೇಗ ಸಶಕ್ತರಾಗಬಹುದು ” ಎಂದು ಹೇಳಿದರು.

" ಅದು ಶಕ್ಯವಿಲ್ಲ " ಎಂದರು ಗಾಂಧಿಯವರು.

" ಅದೇಕೆ ? " ಎಂದು ಕೇಳಿದರು ಡಾಕ್ಟರರು.

" ಹಿಂಡುವಾಗ ಆಕಳಿಗೂ ಎಮ್ಮೆಗೂ ಬಹಳ ಹಿಂಸೆ ಕೊಡುತ್ತಾರೆ ಅದರಿಂದ ಬಿಟ್ಟಿದ್ದೇನೆ" ಎಂದರು ಗಾಂಧಿ.

ಕಸ್ತೂರಬಾಯಿಯು ಅಲ್ಲಿಯೆ ನಿಂತಿದ್ದಳು. ಅವಳು ಹೇಳಿದಳು, " ಹಾಗಾದರೆ ಆಡಿನ ಹಾಲು ತೆಗದುಕೊಳ್ಳಬಹುದಲ್ಲ ! "

ಡಾಕ್ಟರರೂ, ಹೇಳಿದರು " ನೀವು ಆಡಿನ ಹಾಲು ತೆಗದುಕೊಳ್ಳಬಹುದು " ಎಂದು.

ಗಾಂಧಿಯವರು ಒಪ್ಪಿದರು. ಅಂದಿನಿಂದ ಅವರು ಆಡಿನ ಹಾಲನ್ನು ತೆಗೆದುಕೊಳ್ಳುವರು. ಇಂದಿಗೂ ಅವರ ಆಹಾರವೆಂದರೆ ಆಡಿನ ಹಾಲು, ಹಣ್ಣು, ಖರ್ಜೂರ.

---

## ೧೧. ಆಶ್ರಮ.

### ೧

ಆಫ್ರಿಕೆಯಲ್ಲಿ ಇದ್ದಾಗ ಗಾಂಧಿಯವರು ಒಂದು ಪುಸ್ತಕವನ್ನು ಓದಿದರು. ಅದರ ಹೆಸರು ' ಅಂಟು ದಿಸ್ ಲಾಸ್ಟ.' ಆ ಪುಸ್ತಕವು ಅವರ ಮನಸ್ಸನ್ನು ಹಿಡಿಯಿತು. ಅದರಿಂದಲೇ ಅವರು ಅದನ್ನು ತಮ್ಮ ಮಾತೃಭಾಷೆಗೆ-ಗುಜರಾತಿಗೆ-ಭಾಷಾಂತರಿಸಿದರು. ಅದಕ್ಕೆ ಅವರು ' ಸರ್ವೋದಯ ' ಎಂದು ಹೆಸರು ಕೊಟ್ಟಿರುವರು.

ಆ ಪುಸ್ತಕದಲ್ಲಿ ಬರೆದುದು ಏನೆಂದರೆ “ ಶ್ರಮದ ಜೀವನವೇ ಜೀವನ. ಹೊಲವನ್ನು ಉತ್ತಿ ಬಿತ್ತಿ ಬೆಳೆ ತೆಗೆದುಕೊಂಡು, ಅದರಿಂದಲೇ ಜೀವಿಸಬೇಕು. ಇಲ್ಲವೆ ಕೈಗಾರಿಕೆಯಿಂದ ಜೀವಿಸಬೇಕು. ಒಟ್ಟಾಗಿ ಮನುಷ್ಯನು ಸ್ವಾವಲಂಬಿಯಾಗಿರಬೇಕು.”

ಇದು ಗಾಂಧಿಯವರ ಮನಸಿಗೆ ಬಂದಿತು. ಹಾಗೆಯೇ ನಡೆಯ ಬೇಕೆಂದು ನಿಶ್ಚಯಿಸಿದರು. ಅದಕಾಗಿ ಒಂದು ಭೂಮಿಯನ್ನು ಕೊಂಡರು; ಆಶ್ರಮವನ್ನು ಕಟ್ಟಿದರು.

ಹಿಂದೂದೇಶಕ್ಕೆ ಬಂದ ಮೇಲೆ ಇಲ್ಲಿಯೂ ಅದರಂತೆ ಒಂದು ಆಶ್ರಮವನ್ನು ಮಾಡಿಕೊಳ್ಳಬೇಕೆಂದು ಮಾಡಿದರು. ಅದಕಾಗಿ ಸ್ಥಳ ಹುಡುಕತೊಡಗಿದರು. ಪಂಜಾಬದವರು ತಮ್ಮಲ್ಲಿ ಆಶ್ರಮ ಮಾಡಿ ಕೊಳ್ಳಬಹುದು ಎಂದರು; ಕಲಕತ್ತೆಯವರು ತಮ್ಮಲ್ಲಿ ಕರೆದರು; ರಾಜಕೋಟದವರು ತಮ್ಮಲ್ಲಿ ಎಂದರು. ಆದರೆ ಗಾಂಧಿಯವರಿಗೆ ಅವುಗಳಲ್ಲಿ ಯಾವ ಸ್ಥಳವೂ ಮನಸಿಗೆ ಬರಲಿಲ್ಲ. ಅಹಮದಾಬಾದದ ಹತ್ತರ ಸಾಬರಮತಿ ನದಿಯ ದಂಡೆಯ ಮೇಲಿನ ಸ್ಥಳವೇ ಯೋಗ್ಯ ಕಂಡಿತು. ಅಲ್ಲಿಯೇ ಅವರು ತಮ್ಮ ಆಶ್ರಮವನ್ನು ಕಟ್ಟಿದರು. ಅದಕೆ ‘ಸತ್ಯಾಗ್ರಹಾಶ್ರಮ’ ಎಂದು ಹೆಸರಿಟ್ಟರು. ತಮ್ಮ ಬಳಗದವರೊಡನೆ ಅಲ್ಲಿಯೇ ಇರಹತ್ತಿದರು.

---

# ೧೨. ಆಶ್ರಮ

## ( ೨ )

ಆಶ್ರಮದಲ್ಲಿ ಎಲ್ಲ ಪ್ರಾಂತದ ಜನರೂ ಇರುವರು. ಎಲ್ಲ ಜಾತಿಯವರೂ ಇರುವರು. ಗುಜರಾಥದವರಂತೂ ಸರಿಯೆ. ಪಂಜಾಬದವರು ಇರುವರು, ಮಹಾರಾಷ್ಟ್ರದವರು ಇರುವರು, ಮದ್ರಾಸಿನವರು ಇರುವರು, ನೇಪಾಳದವರು ಇರುವರು, ಇಂಗ್ಲಂಡ ಅಮೇರಿಕೆಯವರೂ ಇರುವರು. ಬ್ರಾಹ್ಮಣರು ಇರುವರು, ಜೈನರು ಇರುವರು, ಹೊಲೆಯರು ಇರುವರು, ಕ್ರೈಸ್ತರಿರುವರು. ಅಲ್ಲಿ ಜಾತಿಭೇದವೇ ಇಲ್ಲ.

ಆಶ್ರಮದಲ್ಲಿ ಇರುವವರೆಲ್ಲರು ಕೂಡೆ ಅರಿವೆಯ ಬಟ್ಟೆಗಳನ್ನೇ ಧರಿಸುವರು. ರಾಟೆಯ ಮೇಲೆ ತಾವೇ ನೂತು ಅವುಗಳಿಂದಲೇ ಬಟ್ಟೆಗಳನ್ನು ಮಾಡಿಕೊಳ್ಳುವರು.

ಆಶ್ರಮದಲ್ಲಿ ಇರುವವರೆಲ್ಲರು ಅರುಣೋದಯಕ್ಕೆ ಏಳುತ್ತಾರೆ. ಎಲ್ಲರೂ ಕೂಡಿ ಪ್ರಾರ್ಥನೆ ಮಾಡುತ್ತಾರೆ ಸಾಯಂಕಾಲದಲ್ಲಿಯೂ ಪ್ರಾರ್ಥನೆಯಾಗುತ್ತದೆ, ಭಜನೆಯಾಗುತ್ತದೆ, ಗೀತೆಯ ಪಾರಾಯಣವಾಗುತ್ತದೆ.

ಆಶ್ರಮದಲ್ಲಿ ಇರುವವರೆಲ್ಲರು ಒಂದೇ ಕಡೆಗೆ ಊಟ ಮಾಡುತ್ತಾರೆ. ಅಡಿಗೆಯಲ್ಲಿ ಮಸಾಲೆ, ಇಂಗು, ಒಗ್ಗರಣೆ, ಕಾರ ಉಪಯೋಗಿಸುವದಿಲ್ಲ. ಅವರ ಅಡಿಗೆಯು ಸಾಧಾರಣವಾದದ್ದು.

ಅವರು ಪ್ರತಿದಿವಸ ನಿಯಮಿತ ವೇಳೆಯಲ್ಲಿಯೇ ಊಟಕ್ಕೆ ಕುಳಿತು ಕೊಳ್ಳುವರು. ಶಾಂತಿಮಂತ್ರ ಎಂದು ಊಟಮಾಡುವರು. ಗಾಂಧಿಯ ವರೂ ಒಮ್ಮೊಮ್ಮೆ ಬಡಿಸುವ ಕೆಲಸ ಮಾಡಿರುವರು.

ಆಶ್ರಮವು ಬಹು ಸ್ವಚ್ಛವಾಗಿದೆ. ಅಲ್ಲಿಯವರು ಸಿಕ್ಕಲ್ಲಿ ಉಗುಳುವದಿಲ್ಲ. ಕಸ ಕಡ್ಡಿ ಕಾಗದದ ಚೂರು ಒಗೆಯುವದಿಲ್ಲ. ಎಂಜಲು ಮುಸುರಿ ಚೆಲ್ಲುವದಿಲ್ಲ.


ಶೌಚಕ್ಕಾಗಿಯೂ ಮೂತ್ರಕ್ಕಾಗಿಯೂ ಪಾಯಖಾನೆಗಳಿವೆ. ಅವುಗಳನ್ನು ಆಶ್ರಮವಾಸಿಗಳೇ ಸ್ವಚ್ಛ ಮಾಡಿಕೊಳ್ಳುವರು. ಒಟ್ಟಾಗಿ ಅವರು ಯಾವ ಕೆಲಸವನ್ನೂ ಎರಡನೆಯವರಿಂದ ಮಾಡಿಸುವದಿಲ್ಲ. ಸ್ವಾವಲಂಬನವೇ ಅವರು ಹಿಡಿದ ಮಾರ್ಗ.

---

## ೧೩. ನಡೆವಳಿ.

ಗಾಂಧಿಯವರು ನಡೆಯುವಾಗ ಮೆಲ್ಲಗೆ ಜೋಲಾಡುತ್ತ ಎಂದೂ ನಡೆಯುವದಿಲ್ಲ. ಸೊಟ್ಟಪಟ್ಟು ಕುಳಿತುಕೊಳ್ಳುವದಿಲ್ಲ. ಕಾಲಮೇಲೆ ಕಾಲು ಹಾಕಿಕೊಂಡು ನೀಟಾಗಿ ಕುಳಿತುಕೊಳ್ಳುವರು. ಬರೆಯುವದಾದರೆ ಮೇಜು ಇಟ್ಟುಕೊಂಡು ಅದರ ಮೇಲೆ ಒರಗಿ ಬರೆಯುವದಿಲ್ಲ. ಸಾಲೆಯ ಹುಡುಗರು ಬರೆಯುವಾಗ ಕುಳಿತು ಕೊಳ್ಳುವಂತೆ ಮಂಡೆಗಾಲು ಹಾಕಿ ಕುಳಿತು ಅದರ ಮೇಲೆ ಕಾಗದ

ಇಟ್ಟುಕೊಂಡು ಬರೆಯುವರು. ಬರೆದದ್ದನ್ನು ಎರಡನೆಯ ಸಾರೆ ಓದಿ ನೋಡಿ ತಿದ್ದುವರು. ಅವರಿಗೆ ಸ್ವಚ್ಛತೆಯಂತೂ ಬಹಳ ಬೇಕು. ಅವರ ಅರಿವೆ-ಅಂಚಡಿ ಒಡವೆಗಳೆಲ್ಲವೂ ಸ್ವಚ್ಛವಾಗಿಯೂ ವ್ಯವಸ್ಥಿತವಾಗಿಯೂ ಇರುವವು. ವಿಚಾರ ಮಾಡಿಯೇ ಪ್ರತಿಯೊಂದು ಕೆಲಸವನ್ನು ಮಾಡುವರು.



ಮಹಾತ್ಮರು ಬರೆಯುತ್ತಿರುವರು.

ಅವರು ಮಿತಭಾಷಿಗಳು, ಯಾರ ಕೂಡ ಹೆಚ್ಚು ಮಾತಾಡುವದಿಲ್ಲ. ಮಿತವ್ಯಯಿಗಳು. ಪ್ರತಿಯೊಂದು ವ್ಯವಹಾರದ ಬಗ್ಗೆ ಲೆಕ್ಕ ಇಡುವರು. ಯಾತಕ್ಕಾದರು ಒಂದು ಕಾಸು ವೆಚ್ಚವಾದರೂ ಅದನ್ನು ಬರೆದಿಡುವರು. ಹೀಗೆ ಲೆಕ್ಕವನ್ನು ಇಡುವದು ಬಹಳ ಒಳ್ಳೆಯದೆಂದು

ಹೇಳುತ್ತಾರೆ. ಗಾಂಧಿಯವರ ನಡೆವಳಿ ಚೆನ್ನಾಗಿ ಇಲ್ಲವೆ? ಇದರಂತೆ ನಡೆಯುವದು ಯೋಗ್ಯವೆಂದು ಯಾರಿಗೆ ಎನಿಸಲಿಕ್ಕಿಲ್ಲ!

## ೧೪. ಮೌನವಾರ.

ಸೋಮವಾರವು ಗಾಂಧಿಯವರ ಮೌನವಾರ. ಆ ದಿವಸ ಗಾಂಧಿಯವರು ಯಾರೊಡನೆಯೂ ಮಾತನಾಡುವದಿಲ್ಲ. ಬೇಕಾದಂಥ ಅಗತ್ಯದ ಕೆಲಸವಿದ್ದರೂ ಅವರು ಇದನ್ನು ಪಾಲಿಸುವರು. ಒಳ್ಳೇ ಮಹತ್ವದ ಕೆಲಸವಿದ್ದರೆ ತಾವು ಹೇಳುವದನ್ನು ಬರೆದು ಕೊಡುತ್ತಾರೆ.

ಈ ದಿವಸ ಭಾಷಣವಿಲ್ಲ, ಚರ್ಚೆಯಿಲ್ಲ; ಅದರಿಂದ ಅಂದು ಸಭೆ ಸಮ್ಮೇಲನೆಗಳೂ ಇಲ್ಲ. ತಿರುಗಾಟವು ತಾನಾಗಿಯೇ ನಿಂತಿತು. ಇದರಿಂದ ಗಾಂಧಿಯವರಿಗೆ ವಿಶ್ರಾಂತಿ ಸಿಕ್ಕಂತಾಗುವದು.

ಆ ಹೊತ್ತು ಹಾಸಿಗೆಯ ಮೇಲೆ ಮಲಗಿಕೊಂಡೇ ವೇಳೆ ಕಳೆಯುತ್ತಾರೆಂದು ಮಾತ್ರ ತಿಳಿದುಕೊಳ್ಳಬೇಡಿರಿ. ಹಾಗೆ ಆಲಸ್ಯದಲ್ಲಿ ಅವರು ಎಂದೂ ಹೊತ್ತು ಕಳೆಯುವದಿಲ್ಲ. ವಾರದಲ್ಲಿ ಮಾಡದೆ ಉಳಿದ ಕೆಲಸಗಳನ್ನು ಆ ಹೊತ್ತು ಮಾಡಿ ಮುಗಿಸುವರು.

ಮೌನವ್ರತ ಪಾಲಿಸುವದರಿಂದ ಮನಸ್ಸಿಗೆ ಆನಂದವಾಗುವದು; ಕೆಲಸ ಮಾಡಲಿಕ್ಕೆ ಮತ್ತಷ್ಟು ಹುರುಪು ಬರುವದು. ಪಾಲಿಸಿ ನೋಡಿದರೆ ಪ್ರತಿಯೊಬ್ಬನಿಗೂ ಇದರ ಅನುಭವ ಬರುವಂತಿದೆ.

# ೧೫. ಪ್ರಾಮಾಣಿಕತನ.

ಎರಡನೆಯವರಿಗೆ ಮೋಸ ಮಾಡುವದೆಂದರೆ ಗಾಂಧಿಯುವರ ಮೈಮೇಲೆ ಮುಳ್ಳು ಬಂದಂತಾಗುತ್ತದೆ. ದೊಡ್ಡವರಾದ ಮೇಲೆಯೇ ಹೀಗೆಂದಲ್ಲ; ಚಿಕ್ಕಂದಿನಿಂದಲೂ ಅವರ ಸ್ವಭಾವವೇ ಹೀಗೆ.

ಗಾಂಧಿಯವರು ಸಾಲೆಯಲ್ಲಿ ಕಲಿಯುತ್ತಿದ್ದಾಗಿನ ಮಾತು. ಸಾಲೆಗೆ ಪರೀಕ್ಷಕರು ಬಂದಿದ್ದರು. ಅವರು ವರ್ಗದ ವಿದ್ಯಾರ್ಥಿಗಳಿಗೆ ಕೆಲವು ಶಬ್ದಗಳನ್ನು ಬರೆಯಲು ಹೇಳಿದರು. ಗಾಂಧಿಯವರಿಗೆ ಅವನ್ನು ಬರೆಯಲು ಬರಲಿಲ್ಲ. ಏನೇನೋ ಬರೆಯತೊಡಗಿದರು. ವರ್ಗದ ಶಿಕ್ಷಕರು, ಎಲ್ಲರು ಬರೆದುದನ್ನು ನೋಡುತ್ತ ಬಂದರು. ಗಾಂಧಿಯವರು ತಪ್ಪು ತಪ್ಪು ಬರೆದುದನ್ನು ನೋಡಿದರು. ಮೆಲ್ಲನೆ ತಮ್ಮ ಕಾಲಿನ ಬೆರಳಿನಿಂದ ಅವರ ಕಾಲಿಗೆ ತಾಕಿಸಿ, ಸಂಜ್ಞೆ ಮಾಡಿದರು. "ನೀನು ತಪ್ಪಿರುವೆ. ಹತ್ತರ ಕುಳಿತ ಹುಡುಗನು ಬರೆದುದನ್ನು ನೋಡಿಕೊಂಡು ಬರೆ" ಎಂದು ಹೇಳಬೇಕಾಗಿತ್ತು.

ಪರೀಕ್ಷಕರಿಗೆ ಮೋಸ ಮಾಡುವದು ಗಾಂಧಿಯವರಿಗೆ ಸರಿ ಕಾಣಲಿಲ್ಲ. ತಮಗೆ ಬಂದಂತೆಯೇ ಬರೆದು ಬಿಟ್ಟರು. ಪರೀಕ್ಷಕರು ನೋಡಿದಾಗ ಉಳಿದ ಹುಡುಗರದೆಲ್ಲವೂ ಸರಿಯಾಗಿತ್ತು. ಗಾಂಧಿಯವರದು ಒಬ್ಬರದೇ ತಪ್ಪು.

ಪರೀಕ್ಷಕರು ಹೋದ ಮೇಲೆ ಶಿಕ್ಷಕರು ಎಂದರು, “ ನೋಡು ಹುಚ್ಚ, ನಾನು ಹೇಳಿದಂತೆ ಕೇಳಿದ್ದರೆ ಹೀಗೇಕೆ ಆಗುತಿತ್ತು ? ”.

ಆ ಶಿಕ್ಷಕರು ಕಲಿಸುವ ಅಪ್ರಾಣಿಕತನವು ಗಾಂಧಿಯವರಿಗೆ ಸರಿಯಾಗಿ ಕಾಣಲಿಲ್ಲ. ತಾವು ಒಬ್ಬರೇ ತಪ್ಪಿದುದಕ್ಕೆ ಕೆಡುಕೂ ಎನಿಸಲಿಲ್ಲ. ನೋಡಿ ಬರೆದರೆ ಪರೀಕ್ಷಕರಿಗೆ ಮೋಸ ಮಾಡಿದಂತಾಗುವುದಿಲ್ಲವೆ ?

ಮೋಸ ಮಾಡಲಿಕ್ಕೆ ಕಲಿಸಿದ ಶಿಕ್ಷಕರ ಬಗ್ಗೆ ಮಾತ್ರ ಅವರು ಎಂದೂ ತಿರಸ್ಕಾರ ತೋರಿಸಲಿಲ್ಲ. ‘ ಹೇಗಿದ್ದರೂ ಅವರು ಹಿರಿಯರು. ಗುರುಗಳು; ಅವರಿಗೆ ಮಾನಕೊಡುವದು ತಮ್ಮ ಕರ್ತವ್ಯ’ ಎಂದು ಎಣಿಸುತಿದ್ದರು.

---

## ೧೬ ಸತ್ಯ.

ಗಾಂಧಿಯವರು ಎಂದೂ ಸುಳ್ಳು ಮಾತಾಡಿದವರಲ್ಲ. ಸುಳ್ಳು ಮಾತಾಡುವದೆಂದರೆ ಅವರ ಜೀವದ ಮೇಲೆ ಬರುವದು. ಚಿಕ್ಕಂದಿನಿಂದಲೂ ಹೀಗೆಯೆ.

ಚಿಕ್ಕಂದು ಗಾಂಧಿಯವರಿಗೆ ಕೆಟ್ಟ ಹುಡುಗರ ಸಂಗತಿ ಹತ್ತಿತು. ಬೀಡಿ ಸೇದುವದು, ಅಂಗಡಿಗಳಲ್ಲಿ ಹಿರಿಯರ ತುಡುಗಿನಿಂದ ಕೊಂಡು ತಿನ್ನುವದು ನಡೆಯಿತು.

ಇದಕೆಲ್ಲ ರೊಕ್ಕ ಎಲ್ಲಿಂದ ಬರಬೇಕು? ಮನೆಯಲ್ಲಿ ಕೊಡ ಬಹುದೆ? ಮನೆಯೊಳಗಿನ ಆಳುಮಕ್ಕಳು ಇಟ್ಟ ರೊಕ್ಕ ಎಬ್ಬಿಸುವದು ಪ್ರಾರಂಭವಾಯಿತು.

ಅಂಗಡಿಕಾರನಿಗೆ ಹಣ ಕೊಡತಕ್ಕುದು ಹೆಚ್ಚಾಯಿತು. ಅಂಗಡಿ ಕಾರನು, ಇಂದಿಲ್ಲ ನಾಳೆ ಹಣ ಬರುತ್ತದೆಂದು ಬೇಡಿದಷ್ಟು ಕೊಟ್ಟನು. ಆಳುಮಕ್ಕಳಿಂದ ಎಬ್ಬಿಸಿದುದರಲ್ಲಿ ಅವನಿಗೆ ಕೊಡತಕ್ಕ ಹಣ ಮುಟ್ಟಿ ದಾಯಿತು.

ಮುಂದೆ ಅಂಗಡಿಕಾರನು ಹಣಕ್ಕಾಗಿ ಪೀಡಿಸಹತ್ತಿದ. ಇಂದು ಕೊಡುತೇನೆ, ನಾಳೆ ಕೊಡತೇನೆ ಎಂದು ನಡೆಯಿತು. ಹೀಗೆ ಎಷ್ಟು ದಿನ ನಡೆದೀತು? ಒಂದು ದಿವಸ “ ಹಣಕೊಟ್ಟೇ ಮುಂದೆ ಹೆಜ್ಜೆ ಇಡುವದು ” ಎಂದ ಅಂಗಡಿಕಾರ.

ಈಗ ಏನು ಮಾಡಬೇಕೆಂದು ವಿಚಾರ ಮಾಡಿದರು ಗಾಂಧಿಯು ವರು. ಮನೆಯವರ ಮುಂದೆ ಎಲ್ಲಿ ಹೇಳುವನೋ ಎಂದು ಹೆದರಿಕೆ ಬೇರೆ. ಕೈಮೇಲೆ ದೃಷ್ಟಿ ಹೋಯಿತು. ಕೈಯಲ್ಲಿ ಬಂಗಾರದ ಕಡಗೆ ಇತ್ತು. ಒಂದು ಹಂಚಿಕೆ ಹೊಳೆಯಿತು, “ ಕೈಯಲ್ಲಿಯ ಬಂಗಾರದ ಕಡಗವನ್ನು ಕಡಿದು ಒಂದು ತುಂಡು ಕೊಡಬೇಕು ” ಎಂದು. ಹಾಗೆ ಮಾಡಿಯೂ ಆಯಿತು.

ಗಾಂಧಿಯವರಿಗೆ ಬಹಳ ಕೆಡುಕು ಎನಿಸಿತು. “ ನಾನು ಬೀಡಿ ಸೇದದಿದ್ದರೆ, ಕದ್ದು ತಿನ್ನದಿದ್ದರೆ, ಇದೆಲ್ಲ ಎಲ್ಲಿ ಆಗುತಿತ್ತು? ಆಳುಮಕ್ಕಳಿಂದ ಕದ್ದುದಲ್ಲದೆ ತಾಯಿ ತಂದೆಗಳ ಕಣ್ಣಿಗೂ ಇಂಗು

ಹಚ್ಚಿದಂತಾಯಿತು. ಇದು ಎಂಥ ಪಾಪ! ನಾನು ಮಾಡಿದುದನ್ನೆಲ್ಲ ತಂದೆಯ ಮುಂದೆ ಹೇಳಬೇಕು. ಅವರು ಸಿಟ್ಟಗೇಳಬಹುದು; ಬಡಿಯಬಹುದು; ಅದಕ್ಕೂ ಗಟ್ಟಿಯಾಗಬೇಕು" ಎಂದು ನಿಶ್ಚಯ ಮಾಡಿದರು.

ನಿಶ್ಚಯ ಮಾಡಿದ್ದೇನೋ ಆಯಿತು. ಆದರೆ ಹೇಳುವ ಬಗೆ ಹೇಗೆ? ಬಾಯಿಂದ ಮಾತು ಹೊರಟರಲ್ಲವೆ? ಆಗ ಗಾಂಧಿಯವರು ಒಂದು ಪತ್ರ ಬರೆದರು. ತಂದೆಯ ಹತ್ತರ ಹೋದರು. ಕೈ ಗದಗದ ನಡುಗುತಿತ್ತು; ಕಣ್ಣಿಂದ ದಳದಳ ನೀರು ಹರಿಯುತಿತ್ತು. ಪತ್ರವನ್ನು ತಂದೆಯ ಕೈಯಲ್ಲಿ ಇಟ್ಟರು.

ಅವರ ತಂದೆಯು ಪತ್ರವನ್ನು ಓದಿದರು. ಗಾಂಧಿಯವರು ಆ ಪತ್ರದಲ್ಲಿ ತಾವು ಮಾಡಿದ ಪಾಪವನ್ನು ಒಪ್ಪಿಕೊಂಡು ಕ್ಷಮೆ ಬೇಡಿದ್ದರು. ಸತ್ಯವನ್ನು ಹೇಳಿದುದರಿಂದ ತಂದೆಗೆ ಆನಂದವಾಯಿತು. ಕಣ್ಣನಲ್ಲಿ ನೀರು ತುಂಬಿ ಬಂದವು. ಪ್ರೇಮಭರದಲ್ಲಿ ಮಗನನ್ನು ತಬ್ಬಿಕೊಂಡು ಮುದ್ದಾಡಿದರು.

---

## ೧೭. ವಕೀಲಿ.

"ಗಾಂಧಿಯವರು ಎಂದೂ ಸುಳ್ಳು ಹೇಳಲಿಲ್ಲವೆ? ಅವರು ವಕೀಲರಾಗಿ ವ್ಯಾಜ್ಯ ನಡಿಸಿದಾಗಲೂ ಸುಳ್ಳು ಹೇಳಲಿಲ್ಲವೆ?

ಎಂಥ ಆಶ್ಚರ್ಯ! ಗಾಂಧಿಯವರು ಸುಳ್ಳು ಹೇಳಲಿಲ್ಲವೆಂಬ ಮಾತೇ ಸುಳ್ಳು!" ಎಂದು ಹಲವರು ಎನಬಹುದು.

"ವಕೀಲಿಯೆಂದರೆ ಸುಳ್ಳು ಹೇಳುವ ಉದ್ಯೋಗ. ನಿಜವಿದ್ದುದನ್ನು ಇಲ್ಲವೆಂದು ಸಾಧಿಸುವ ಉದ್ಯೋಗ. ಇಲ್ಲದ್ದನ್ನು ನಿಜವಾಗಿರುವದೆಂದು ಸಾಧಿಸುವ ಉದ್ಯೋಗ" ಎಂದು ಅವರೂ ಕೇಳಿದ್ದರು. ಆದರೆ ವಕೀಲಿ ಮಾಡುವಾಗಲೂ ಸುಳ್ಳು ಹೇಳುವ, ಸುಳ್ಳಾಗಿರುವದನ್ನು ನಿಜವೆಂದು ಸಾಧಿಸುವ ಪ್ರಸಂಗಗಳನ್ನು ಅವರು ತಂದುಕೊಳ್ಳಲಿಲ್ಲ. ಅಸತ್ಯವೆಂದು ತಿಳಿದು ಬಂದ ವ್ಯಾಜ್ಯಗಳನ್ನೇ ಅವರು ಹಿಡಿಯುತಿರಲಿಲ್ಲ. ಹಣಬೇಕು ಎಂದಿದ್ದರಲ್ಲವೆ ಸುಳ್ಳು ಹೇಳುವುದು?

ದಕ್ಷಿಣ ಆಫ್ರಿಕೆಯಲ್ಲಿ ವಕೀಲಿ ಮಾಡುತಿದ್ದಾಗ ನಡೆದ ಒಂದು ಸಂಗತಿ. ಒಬ್ಬನು ಬಂದು ತನ್ನ ಪಕ್ಷವೇ ಸತ್ಯವೆಂದು ವಿಶ್ವಾಸ ಹುಟ್ಟುವಂತೆ ಗಾಂಧಿಯವರ ಮುಂದೆ ಹೇಳಿದ. ಹಾಗೆ ಇರದೆ ಗಾಂಧಿಯವರು ವ್ಯಾಜ್ಯವನ್ನೇ ಹಿಡಿಯುತಿರಲಿಲ್ಲ. ಅವನು ಹೇಳುವುದು ಸರಿಯಾಗಿರಬೇಕೆಂದು ನಂಬಿದರು. ವ್ಯಾಜ್ಯ ಹಿಡಿದರು, ನ್ಯಾಯಾಧೀಶರ ಮುಂದೆ ತಂದರು. ಆದರೆ ಸಾಕ್ಷಿಯ ಕಾಲದಲ್ಲಿ ಅವನ ಪಕ್ಷವು ಸತ್ಯವಲ್ಲವೆಂದು ಅವರ ಮನವರಿಕೆ ಆಯಿತು.

ತಮ್ಮ ಪಕ್ಷವು ಸತ್ಯವೇ ಇರಲಿ ಅಸತ್ಯವೇ ಇರಲಿ ಸತ್ಯವೆಂದು ಸಾಧಿಸುವದೇ ವಕೀಲರ ಕೆಲಸ. ಹೀಗೆ ಮಾಡಿದರೆಯೇ ಅವರ ಕಡೆಗೆ ವ್ಯಾಜ್ಯಗಳು ಬರುವವು. ಆದರೆ ಗಾಂಧಿಯವರು ಇಂಥ ವಕೀಲರೆ? ತಮ್ಮ ಪಕ್ಷವು ಅಸತ್ಯವೆಂದು ತಿಳಿದ ಕೂಡಲೆ ಎದ್ದರು,

ನ್ಯಾಯಾಧೀಶನಿಗೆ ಹೇಳಿದರು, “ ನಮ್ಮ ಪಕ್ಷಕಾರನ ದಾವೆ ತೆಗೆದು ಹಾಕಬೇಕು; ಅವನು ಹೇಳುವದು ಸುಳ್ಳಾಗಿರುತ್ತದೆ ” ಎಂದು.

ಎರಡನೆಯ ಪಕ್ಷದ ವಕೀಲರು ಆಶ್ಚರ್ಯಚಕಿತರಾದರು. ನ್ಯಾಯಾಧೀಶರಿಗೆ ಒಳ್ಳೇ ಸಂತೋಷವಾಯಿತು. ಸುಳ್ಳು ದಾವೆಯನ್ನು ತಮ್ಮ ಕಡೆಗೆ ತಂದುದರಿಂದ ಗಾಂಧಿಯವರು ಪಕ್ಷಕಾರನನ್ನು ಒಳಿತಾಗಿ ಬಯ್ದು ಕಳಿಸಿದರು.

---

## ೧೮. ಅಹಿಂಸೆ.

### ( ೧ )

ಬೇರೊಬ್ಬರನ್ನು ಹೊಡೆಯಬಾರದು, ಕೊಲ್ಲಬಾರದು, ಏನಾದರೂ ಎಂದು ಮನಸ್ಸನ್ನೂ ನೋಯಿಸಬಾರದು. ಇಷ್ಟೇ ಅಲ್ಲ, ಒಬ್ಬರ ವಿಷಯವಾಗಿ ಮನದಲ್ಲಿ ಡಂಕು ಹಿಡಿಯಬಾರದು; ಅವರಲ್ಲಿಯೂ ಪ್ರೇಮವಿರಬೇಕು. ಇದು ಅಹಿಂಸೆ. ಗಾಂಧಿಯವರು ಇಂಥ ಅಹಿಂಸೆಯ ವ್ರತವನ್ನು ಪೂರ್ಣವಾಗಿ ಪಾಲಿಸುವರು.

ಗಾಂಧಿಯವರು ಮೊನ್ನೆ ಮೊನ್ನೆ ಇಂಗ್ಲಂಡಿಗೆ ಹೋಗಿದ್ದರು. ಗಾಂಧಿಯವರಿಗೆ ಚಿಕ್ಕಮಕ್ಕಳೆಂದರೆ ಬಲು ಪ್ರೀತಿ. ಅಲ್ಲಿಯೂ ಮಕ್ಕಳ ಕೂಡ ಕೆಲವು ವೇಳೆ ಕಳೆಯುತಿದ್ದರು. ಅವರ ಕೂಡ ಆಡುತಿದ್ದರು; ಕಥೆ ಹೇಳುತಿದ್ದರು; ಹಾಡುತಿದ್ದರು. ಚಿಕ್ಕಮಕ್ಕಳ ಸಾಲಿ

ಗಳಿಗೆ ಹೋಗಿ ಅವರ ಕೂಡ ಮಾತಾಡಿ ಅವರ ಚಿತ್ರಗಳನ್ನೂ ತೆಗೆದು ಕೊಂಡು ಬಂದಿರುವರು.

ಇಂಗ್ಲಂಡಿನಲ್ಲಿರುವಾಗ ಮಕ್ಕಳ ಸಲುವಾಗಿಯೇ ಒಂದು ಸಭೆ ಮಾಡಿದರು. ಸಭೆಯು ಹುಡುಗ ಹುಡುಗೆಯರಿಂದ ತುಂಬಿ ಹೋಗಿತ್ತು. ಸ್ಥಳವಿಲ್ಲದುದರಿಂದ ಎಂಥೆಂಥ ದೊಡ್ಡವರಿಗೂ ಒಳಗೆ ಪ್ರವೇಶ ದೊರೆಯದೆ ಹೋಯಿತು. ಗಾಂಧಿಯವರು ನಡುವೆ ನೆಲದ ಮೇಲೆ ಕುಳಿತರು. ಅವರ ಸುತ್ತಲೂ ಹುಡುಗರು ಕುಳಿತರು.

ಹುಡುಗರು ಸುಮ್ಮನಿರುವರೆ? ಒಬ್ಬ ಕೇಳಿದ, " ಹಿಂದುಸ್ಥಾನದ ಹವೆ ಹೇಗೆ? " ಮತ್ತೊಬ್ಬ ಕೇಳಿದ, " ಅಲ್ಲಿ ಹತ್ತಿ ಬೆಳೆಯುವದೆ? ಹತ್ತಿಯ ಗಿಡವು ಹೇಗೆ ಇರುವದು? " ಇನ್ನೊಬ್ಬ ಕೇಳಿದ, " ಅಲ್ಲಿಯ ಮಾತು ಹೇಗೆ? " ಬೇರೊಬ್ಬ, " ಅಲ್ಲಿಯ ಹುಡುಗರು ನಮ್ಮಂತೆ ಆಡುತ್ತಾರೆಯೆ? " ಎಂದು ಕೇಳಿದ.

ಗಾಂಧಿಯವರು ಸಮಾಧಾನದಿಂದ ಎಲ್ಲರ ಪ್ರಶ್ನೆಗಳಿಗೂ ಸರಿಯಾಗಿ ಉತ್ತರ ಹೇಳಿದರು. " ಎಲ್ಲಿಯಾದರೇನು? ಯಾವ ಮಾತಾದರೇನು? ಎಲ್ಲವುಗಳ ಮೂಲ ಒಂದೇ " ಎಂದು ಹೇಳಿದರು.

ಆಗ ಒಬ್ಬ ಹುಡುಗ ಎಂದ, " ಹಾಗಾದರೆ ನಾವೆಲ್ಲ ಒಂದೇ ಮನೆತನಕ್ಕೆ ಸೇರಿದವರು. "

ಗಾಂಧಿಯವರು ಹೇಳಿದರು, "ಹೌದು, ಅದಕಾಗಿಯೆ ನಾವೆಲ್ಲ ಅಣ್ಣತಮ್ಮಂದಿರಂತೆ ಇರಬೇಕು. "

ಅಲ್ಲಿಯ ಕೆಲವರು ತುಂಟ ಹುಡುಗರು ಎಂದರು, " ನಾವೇನು ಬಿಟ್ಟಪ್ಪರಲ್ಲ ನೋಡಿರಿ, ಬಾಪೂಜಿ; ಯಾರಾದರೂ ನಮ್ಮ ಮೇಲೆ ಕೈ ಮಾಡಿದರೆ ನಾವೂ ಅವರಿಗೆ ಒಂದು ಕೈ ತೋರಿಸಿಯೇ ಬಿಡುತ್ತೇವೆ. "

ಆಗ ಗಾಂಧಿಯವರು ಹೇಳಿದರು " ಹಾಗೆ ಮಾಡಬಾರದು. ಒಬ್ಬರಿಗೆ ತೊಂದರೆ ಕೊಡುವದು ಸರಿಯಲ್ಲ. ನಮಗೆ ತೊಂದರೆ ಕೊಟ್ಟವರ ಕೂಡ ಸಹ ಪ್ರೀತಿಯಿಂದಲೇ ನಡೆಯಬೇಕು. ಅವರು ತಾವಾಗಿಯೇ ನಮ್ಮ ಗೋಜಿಗೆ ಬರುವದನ್ನು ಬಿಡುವರು. ಮಹಾತ್ಮಾ ಏಸುಕ್ರಿಸ್ತನೇ ಹೇಳಿದ್ದಾನೆ, ' ಒಂದು ಕೆನ್ನೆಯ ಮೇಲೆ ಬಡಿದರೆ ಮತ್ತೊಂದು ಕೆನ್ನೆ ಮುಂದೆ ಮಾಡಿರಿ ? ' ಎಂದು.

ಈ ಪ್ರಕಾರ ಉಪದೇಶ ಮಾಡಲು ಎಲ್ಲ ಹುಡುಗರು ಹಾಗೆಯೆ ನಡೆಯುವದಾಗಿ ಒಪ್ಪಿಕೊಂಡರು.

---

## ೧೯. ಅಹಿಂಸೆ.

### ( ೨ )

ಮನುಷ್ಯರನ್ನಷ್ಟೇ ಅಲ್ಲ, ಯಾವ ಪ್ರಾಣಿಯನ್ನೂ ಹಿಂಸಿಸಬಾರದೆಂದು ಗಾಂಧಿಯವರ ಅಭಿಪ್ರಾಯ. ಬಾಯಿಂದ ಮಾತ್ರ ಹೀಗೆ ಹೇಳುವವರೆಂದಲ್ಲ. ಅವರು ಅದರಂತೆ ನಡೆಯುವರು. ಎಂಥ ಕಷ್ಟದ ಪ್ರಸಂಗದಲ್ಲಿಯೂ ಅದನ್ನು ಬಿಟ್ಟಿಲ್ಲ.

ಗಾಂಧಿಯವರ ಎರಡನೆಯ ಮಗನ ಹೆಸರು ಮಣಿಲಾಲ. ಅವನು ಒಮ್ಮೆ ವಿಷಮಜ್ವರದಿಂದ ಹಾಸಿಗೆ ಹಿಡಿದನು. ಬಹಳ ಜ್ವರ ಬರುತಿದ್ದವು. ಸನ್ನೆ ಸಹ ಕೂಡಿತು. ಗಾಂಧಿಯವರು ಡಾಕ್ಟರ ನನ್ನು ಕರೆದು ತಂದರು.

ಡಾಕ್ಟರರು ಹೇಳಿದರು, " ಈಗ ಔಷಧದಿಂದ ಏನೂ ಆಗುವಂತಿಲ್ಲ. ಇವನು ಬದುಕಬೇಕಾದರೆ ಒಂದೇ ಒಂದು ಉಪಾಯ. ಇವನಿಗೆ ತತ್ತಿ, ಕೋಳಿಯ ಮರಿಯ ಸಾರು ಕೊಡಬೇಕು. "

ಗಾಂಧಿಯವರು ಹೇಳಿದರು, " ಅದಾಗುವದಿಲ್ಲ; ನಾವು ಮಾಂಸಾಹಾರಿಗಳಲ್ಲ. ನಮ್ಮ ಸುಖದ ಸಲುವಾಗಿ ಯಾವದೇ ಪ್ರಾಣಿಯನ್ನು ಕೊಲ್ಲುವದಕ್ಕೆ ನನ್ನ ಮನಸ್ಸು ಒಪ್ಪುವದಿಲ್ಲ. ಎರಡನೆಯ ಉಪಾಯವೇನಾದರೂ ಇದ್ದರೆ ಹೇಳಿರಿ. "

ಡಾಕ್ಟರರು— " ಎರಡನೆಯ ಉಪಾಯವೇ ಇಲ್ಲ. ನಿಮ್ಮ ಮಗನು ಬದುಕಬೇಕೆಂದಿದ್ದರೆ ನಾನು ಈಗ ಹೇಳಿದಂತೆ ಮಾಡಲೇಬೇಕು. ಇಂದಿನ ವರೆಗೆ ನಾನು ಎಷ್ಟೋ ಶಾಕಾಹಾರಿ ಹಿಂದೂ ಜನರಿಗೆ ಔಷಧ ಕೊಟ್ಟಿರುವೆನು. ಅವರು ಎರಡನೆಯದೆನ್ನದೆ ನಾನು ಕೊಟ್ಟಿದನ್ನು ತೆಗೆದುಕೊಂಡಿರುವರು.

ಗಾಂಧಿ— " ನೀವು ಡಾಕ್ಟರರು. ಹೀಗೆ ಹೇಳುವದು ಸರಿಯೆ. ನೀವು ಹೇಳುವದು ಬೇರೊಂದು ಪ್ರಾಣಿಯ ಹಿಂಸೆ ಮಾಡಿರೆಂದು. ಔಷಧಕ್ಕಾಗಿಯಾದರೂ ಪ್ರಾಣಿಹಿಂಸೆ ಮಾಡುವದು ನನ್ನಿಂದ ಎಂದಿಗೂ ಆಗದು. ಜೀವ ಹೋದರೂ ಮಾಡಬಾರದ ಕೆಲಸವದು.

ಡಾಕ್ಟರರು— " ನಿಮ್ಮ ಮನಸು, ನೋಡಿರಿ. "

ಗಾಂಧಿ— " ಡಾಕ್ಟರರೇ, ನಾನೇ ಕೆಲವು ಚಿಕಿತ್ಸೆ ಮಾಡುತ್ತೇನೆ. ನಿವು ನನಗೆ ಸಹಾಯ ಮಾಡಿರಿ. "

ಗಾಂಧಿಯವರೇ ಚಿಕಿತ್ಸೆ ಮಾಡಿದರು. ಸುದೈವದಿಂದ ಮಣಿಲಾಲನಿಗೆ ನೆಟ್ಟಗಾಯಿತು. ಇಂಥ ಕಠಿನ ಪ್ರಸಂಗದಲ್ಲಿಯೂ ಅವರು ಪ್ರಾಣಿಹಿಂಸೆಗೆ ಮನಸು ಮಾಡಲಿಲ್ಲ.

---

# ೨೦. ದಕ್ಷಿಣ ಆಫ್ರಿಕೆಯಲ್ಲಿ.

## ( ೧ )

ಗಾಂಧಿಯವರು ಒಂದು ವ್ಯಾಜ್ಯ ನಡಿಸುವ ಸಲುವಾಗಿ ದಕ್ಷಿಣ ಆಫ್ರಿಕೆಗೆ ಹೋಗಿದ್ದರೆಂಬದು ನಿಮಗೆ ಗೊತ್ತೇ ಇದೆ. ಅಲ್ಲಿ ಹಿಂದೂ ಜನರ ಸಲುವಾಗಿ ಬಡಿದಾಡಿದುದೂ ಗೊತ್ತಿದೆ. ಅಲ್ಲಿಯೇ ಮನೆಮಾಡಿಕೊಂಡಿರಬೇಕೆಂದು ತಮ್ಮ ಹೆಂಡರು ಮಕ್ಕಳನ್ನು ಕರೆದುಕೊಂಡು ಹೋದರು.

ಇದು ಎರಡನೆಯ ಸಾರೆ ಹೋಗುವದು. ಮೊದಲ ಸಾರೆ ಹೋದಾಗ ಹಿಂದೂ ಜನರ ಪಕ್ಷ ಹಿಡಿದು ಬಡಿದಾಡಿದುದರಿಂದ ಅಲ್ಲಿಯ ಯುರೋಪಿಯನರಿಗೆ ಸಿಟ್ಟು ಬಂದಿತ್ತು. ಗಾಂಧಿಯವರು ತಿರುಗಿ ಹಿಂದುಸ್ಥಾನಕ್ಕೆ ಬಂದದ್ದರಿಂದ ' ಪೀಡೆ ಹೋಯಿತು ' ಎಂದುಕೊಂಡಿದ್ದರು. ಮತ್ತೆ ಆಫ್ರಿಕೆಗೆ ಬರುತ್ತಾರೆಂದಕೂಡಲೆ ಅವರ ತಲೆ ತಿರುಗಿತು.

ಒಬ್ಬ ಎಂದ, " ಅವನನ್ನು ಇಲ್ಲಿ ಬರಗೊಡಬಾರದು. "

ಮತ್ತೊಬ್ಬ ಎಂದ, " ಸರಕಾರದವರಿಂದ ಆ ಪ್ರಕಾರ ಹುಕುಮು ತೆಗಿಸಿ ಬಿಡೋಣ. "

ಇನ್ನೊಬ್ಬ ಎಂದ, " ಸರಕಾರವು ಕೇಳಿದರೆ ಕೇಳಲಿ, ಇಲ್ಲದಿದ್ದರೆ ನಾವೇ ಗಾಂಧಿಯನ್ನು ಎತ್ತಿ ಸಮುದ್ರದಲ್ಲಿ ಹಾಕಿ ಬಿಡೋಣ. "

" ಗಾಂಧಿಯವರು ತಮ್ಮ ದೇಶದಲ್ಲಿ ಇಳಿಯಬಹುದು " ಎಂದರು ಸರಕಾರದವರು. ಜನರು ಸಿಟ್ಟಿನಲ್ಲಿ ಇದ್ದುದು ಸರಕಾರಕ್ಕೂ ಗೊತ್ತಿತ್ತು. ಅದರಿಂದ " ಗಾಂಧಿಯವರು ರಾತ್ರಿಯ ವೇಳೆ ಮನೆಗೆ ಹೋಗಬೇಕು " ಎಂದು ಒಬ್ಬ ಅಧಿಕಾರಿಯು ಹೇಳಿ ಕಳಿಸಿದ.

ಗಾಂಧಿಯವರ ಗೆಳೆಯನೊಬ್ಬ ಅವರ ಬಳಿ ಬಂದ " ಛೀ! ರಾತ್ರಿಯಲ್ಲಿ ಕಳ್ಳನಂತೆ ಮನೆ ಸೇರುವದೆ? ಗಾಂಧಿ, ನಡೆಯಿರಿ, ಈಗಲೇ ಹೋಗೋಣ. ಹೋಗುವದಕ್ಕೆ ಹೆದರಿಕೆಯೆ ನಿಮಗೆ? " ಎಂದು ಕೇಳಿದ.

ಗಾಂಧಿಯವರು ಆಗಲೇ ಹೋಗುವದಕ್ಕೆ ಒಪ್ಪಿದರು. ತಮ್ಮ ಸಲುವಾಗಿ ತಮ್ಮ ಹೆಂಡರು ಮಕ್ಕಳಿಗೆ ತೊಂದರೆಯಾಗಬಾರದೆಂದು ಅವರನ್ನು ಗಾಡಿಯಲ್ಲಿ ಕುಳ್ಳಿರಿಸಿ ಮನೆಗೆ ಕಳಿಸಿದರು. ಆ ಮೇಲೆ ಹಡಗದಿಂದ ಇಳಿದು ತಮ್ಮ ಗೆಳೆಯನ ಕೂಡ ಮನೆಗೆ ಹೊರಟರು.

ಗಾಂಧಿಯವರು ತುಸು ದಾರಿ ಹೋಗುವದರೊಳಗಾಗಿ ಅಲ್ಲಿಯ ಹುಡುಗರು ನೋಡಿದರು. " ಎಲೆ ಎಲೆ! ಗಾಂಧಿ! ಗಾಂಧಿ! " ಎಂದು ಕೂಗತೊಡಗಿದರು.

ಆ ಕಡೆಯಿಂದ ಈ ಕಡೆಯಿಂದ ಜನರು ಬಂದರು. " ಹಿಡಿಯಿರಿ ಹಿಡಿಯಿರಿ ! ಹೊಡೆಯಿರಿ ಹೊಡೆಯಿರಿ !! " ಎಂದು ಕೂಗತೊಡಗಿದರು.

ಗಾಂಧಿಯವರ ಗೆಳೆಯ ಒಂದು ' ರಿಕ್‌ಷಾ ' ತಂದ. ' ರಿಕ್‌ಷಾ ' ಎಂಬದು ಮನುಷ್ಯರು ಎಳೆಯುವ ಬಂಡಿ. ಆಫ್ರಿಕೆಯಲ್ಲಿ ಅದಕ್ಕೆ ಈ ಹೆಸರಿದೆ. ಗಾಂಧಿಯವರಿಗೆ ಆ ಬಂಡಿಯಲ್ಲಿ ಕುಳಿತುಕೊಳ್ಳಲು ಸಹ ಹುಡುಗರು ಅವಕಾಶ ಕೊಡಲಿಲ್ಲ. ಬಂಡಿಯವನನ್ನು ಬೆದರಿಸಿ ಕಳಿಸಿದರು. ಗಾಂಧಿಯವರ ಗೆಳೆಯನನ್ನು ಬೇರೆ ಕಡೆಗೆ ಎಳೆದೊಯ್ದರು. ಗಾಂಧಿಯವರ ಮೇಲೆ ಕಲ್ಲು ಒಗೆಯತೊಡಗಿದರು.

ಯಾರು ಕಲ್ಲು ಒಗೆದರು; ಯಾರು ಹೆಂಟೆ ಒಗೆದರು; ಯಾರು ಕೊಳೆತ್ತ ತ್ತಗಳನ್ನು ಒಗೆದರು. ಕೆಲವರು ಬಂದು ಹೊಡೆಯತೊಡಗಿದರು. ಬೇರೆ ಕೆಲವರು ತಲೆಯ ಮೇಲಿನ ರುಮಾಲ ಕಸಿದುಕೊಂಡರು.

ಅದೇ ದಾರಿಯಿಂದ ಪೋಲೀಸ ಅಧಿಕಾರಿಯ ಹೆಂಡತಿ ಹೋಗುತಿದ್ದಳು. ಆಕೆ ಇದನ್ನು ನೋಡಿದಳು. ಅವಳಿಗೆ ಗಾಂಧಿಯವರ ಪರಿಚಯ ಇದ್ದಿತು. ಅವಳು ಒಳ್ಳೇ ಧೈರ್ಯದಿಂದ ಮುಂದೆ ಬಂದಳು. ತನ್ನ ಕೊಡೆ ತೆಗೆದು ಗಾಂಧಿಯವರಿಗೆ ಮರೆಯಾಗಿ ಹಿಡಿದಳು. ಅಷ್ಟರಲ್ಲಿ ಪೋಲೀಸರು ಬಂದರು. ಗಾಂಧಿಯವರನ್ನು ಮನೆಗೆ ಮುಟ್ಟಿಸಿದರು.

---

# ೨೧. ದಕ್ಷಿಣ ಆಫ್ರಿಕೆಯಲ್ಲಿ.

(೨)

ಜನರ ತಂಡವು ಗಾಂಧಿಯವರು ಇಳಿದ ಮನೆಗೂ ಹೋಯಿತು. ಮನೆ ಮುತ್ತಿ ನಿಂತಿತು. “ನಮಗೆ ಗಾಂಧೀ ಬೇಕು. ಗಾಂಧಿ! ಗಾಂಧಿಯನ್ನು ಕೊಡದಿದ್ದರೆ ಈ ಮನೆಗೆಯೇ ಬೆಂಕಿ ಬಡೆಯುವೆವು” ಎಂದು ಕೂಗತೊಡಗಿತು.

ಜನಸಮೂಹವು ಹೆಚ್ಚುತ್ತಲೇ ಇತ್ತು. ಪೋಲೀಸ ಅಧಿಕಾರಿಗೆ ಅದನ್ನು ತಡೆಯುವದು ಅಶಕ್ಯವೆನಿಸಿತು. ಅವನು ಗಾಂಧಿಯವರಿಗೆ ಹೇಳಿದ, “ನೀವು ವೇಷ ಬದಲಿಸಿ ಇಲ್ಲಿಂದ ಪಾರಾಗಬೇಕು.”

ಗಾಂಧಿಯವರು ಅದಕ್ಕೆ ಒಪ್ಪಿದರು. ಪೋಲೀಸನ ವೇಷ ಹಾಕಿಕೊಂಡರು. ಸಂದಿ ಗೊಂದಿಯಲ್ಲಿ ಹಾಯುತ್ತ ಪಾರಾಗಿಹೋದರು. ಗಾಂಧಿಯವರು ಹೋಗುವ ವರೆಗೆ ಪೋಲಿಸ ಅಧಿಕಾರಿಯು ತಾನೂ ಸಮಾಜದ ಕೂಡ ಕೂಗುತಿದ್ದ, “ಗಾಂಧಿಯನ್ನು ಗಲ್ಲಿಗೆ ಏರಿಸೋಣ! ಗಾಂಧಿಯನ್ನು ಒಯ್ದು ಆ ಮರಕ್ಕೆ ಉರುಲು ಹಾಕಿ ಬಿಡೋಣ!” ಎಂದ್ನು.

ಗಾಂಧಿಯವರು ಪಾರಾಗಿ ಹೋದ ಮೇಲೆ ಆ ಅಧಿಕಾರಿ ಎಂದ, “ಎಲ ಎಲಾ! ಬೇಟೆ ತಪ್ಪಿಸಿಕೊಂಡು ಹೋಯಿತು.”

ಕೂಡಿದ ಜನರಲ್ಲಿ ಕೆಲವರು ಮುಂದೆ ಬಂದು ಹೇಳಿದರು, " ಛೀ, ಹೇಗೆ ಹೋಗುವದು? ನಾವು ಇಷ್ಟು ಜನ ಇಲ್ಲಿ ಇರಲಿಕ್ಕೆ! ನಡೆಯಿರಿ ನೋಡೋಣ, ಒಳಗೆ ನುಗ್ಗಿರಿ !! "

ಪೋಲಿಸ ಅಧಿಕಾರಿ ಹೇಳಿದ, " ನಾನು ಹೇಳುತ್ತೇನೆ, ಬೇಟೆಯು ತಪ್ಪಿಸಿಕೊಂಡು ಹೋಯಿತು. ಇನ್ನು ಮನೆಗೆ ಹೋಗಿರಿ. "

ಜನರು ಎಂದರು, " ಇದನ್ನು ನಾವು ನಂಬುವದಿಲ್ಲ ! "

ಪೋಲೀಸ ಅಧಿಕಾರಿ—" ಹೀಗಾದರೆ ನಿಮ್ಮಲ್ಲಿ ಇಬ್ಬರನ್ನು ನನ್ನ ಕೂಡ ಕಳಿಸಿರಿ. ಅವರು ಮನೆಹೊಕ್ಕು ನೋಡಿಕೊಂಡು ಬರಲಿ. "

ಜನರು ಅದಕ್ಕೆ ಒಪ್ಪಿದರು; ಅವರಲ್ಲಿಯ ಇಬ್ಬರು ಒಳಗೆ ಹೋಗಿ ನೋಡಿದರು. ಅಲ್ಲಿ ಎಲ್ಲಿ ಗಾಂಧಿ ಇರಬೇಕು? ಮೋರೆ ಸಪ್ಪಗೆ ಮಾಡಿಕೊಂಡು ಹೊರಗೆ ಬಂದರು. ಪೋಲೀಸ ಅಧಿಕಾರಿಯು ಹೇಳುವದು ಸರಿಯೆಂದು ಎಲ್ಲರಿಗೂ ಹೇಳಿದರು. ಆಗ ಜನರೆಲ್ಲ ಮನೆಗೆ ಹೋದರು.

ಈ ಸುದ್ದಿ ಮೇಲಿನ ಅಧಿಕಾರಿಗಳಿಗೆ ತಿಳಿಯಿತು. ಅವರಲ್ಲಿಯ ಕೆಲವರು ಗಾಂಧಿಯವರಿಗೆ ಹೇಳಿದರು, " ನಿಮ್ಮನ್ನು ಹೊಡೆದವರ ಮೇಲೆ ಫಿರ್ಯಾದು ಮಾಡಿರಿ. ಅವರಿಗೆ ಯೋಗ್ಯ ಶಾಸನವಾಗಲಿ. "

ಅದಕ್ಕೆ ಗಾಂಧಿಯವರು ಎಂದರು " ಛೆ, ಛೇ ! ಅವರ ಮೇಲೆ ಯಾಕೆ ಫಿರ್ಯಾದು? ಅವರು ಅಂಥ ತಪ್ಪು ಏನು ಮಾಡಿರುವರು? ನಾನು ಹಿಂದುಸ್ಥಾನದಲ್ಲಿ ಅವರನ್ನು ಬೈದೆನೆಂದು ತಿಳಿದುಕೊಂಡಿರುವರು. ಅದರಿಂದ ಹಾಗೆ ಮಾಡಿದರು. ಅವರಿಗೆ ಹೀಗೆ ತಿಳುವಳಿಕೆ

ಮಾಡಿಕೊಟ್ಟವರು ನಿಮ್ಮಂಥವರು. ಯಾರ ಮೇಲೆಯೂ ನನ್ನ ಸಿಟ್ಟು ಇಲ್ಲ, ಯಾರಿಗೂ ಶಾಸನವಾಗಬೇಕಾಗಿಲ್ಲ.

ನೋಡಿದಿರಾ, ಗಾಂಧಿಯವರ ಸ್ವಭಾವ. ಅವರು ಅಹಿಂಸೆಯ ತತ್ವವನ್ನು ಪಾಲಿಸುವ ರೀತಿ.

---

## ೨೨. ಉಪವಾಸ.

ಯಾರಿಗೂ ತೊಂದರೆ ಕೊಡಬಾರದೆಂದು ಗಾಂಧಿಯವರ ಅಭಿಪ್ರಾಯ. ತಮ್ಮ ಆಶ್ರಮದಲ್ಲಿಯ ಹುಡುಗರು ತಪ್ಪು ಮಾಡಿದರೆ ಸಹ ಅವರನ್ನು ದಂಡಿಸುವದಿಲ್ಲ. ಬೈದು ಅವಮಾನ ಪಡಿಸುವದಿಲ್ಲ. ಎರಡನೆಯವರಿಗೂ ಹೀಗೆ ಮಾಡಗೊಡುವದಿಲ್ಲ.

ಹುಡುಗರಿಂದ ಸಣ್ಣಪುಟ್ಟ ತಪ್ಪುಗಳಾದರೆ ಆ ಮಾತು ಬೇರೆ. ದೊಡ್ಡ ದೊಡ್ಡ ತಪ್ಪುಗಳಾದರೆ ಹೇಗೆ? ಅದಕ್ಕೆ ಧಂಡನೆ ಬೇಡವೇ? ಎಂದು ಕೇಳಬಹುದು. ಆ ಪ್ರಸಂಗದಲ್ಲಿಯೂ ಅವರು ಮಕ್ಕಳನ್ನು ದಂಡಿಸುವದಿಲ್ಲ. ಆ ಹುಡುಗರಲ್ಲಿ ಅಷ್ಟುಮಟ್ಟಿಗೆ ನೀತಿಯು ನೆಲೆಗೊಳ್ಳದಿರುವದು ತಮ್ಮ ತಪ್ಪು ಎಂದು ತಿಳಿಯುತ್ತಾರೆ. "ನನ್ನ ಹತ್ತರ ಇರುವ ಹುಡುಗರು ಹೀಗಾಗಬೇಕೆ? ದೇವರೇ, ಹೀಗೆ ತಪ್ಪು ಮಾಡದಂತೆ ಅವರಿಗೆ ಬುದ್ಧಿ ಕೊಡು" ಎಂದು ದೇವರಿಗೆ ಬೇಡಿಕೊಳ್ಳುತ್ತಾರೆ. ಅದಕಾಗಿ ಉಪವಾಸ ಮಾಡುತ್ತಾರೆ.

ಆಶ್ರಮದಲ್ಲಿ ಹುಡುಗರು ಸರಿಯಾದ ದಾರಿಯಲ್ಲಿಯೆ ನಡೆಯ ಬೇಕೆಂದು ಗಾಂಧಿಯವರು ಎರಡು ಸಾರೆ ಉಪವಾಸ ಮಾಡಿದರು. ಒಂದೆರಡು ದಿವಸವಲ್ಲ; ಒಮ್ಮೆ ಒಂದೇ ಸವನೆ ಏಳು ದಿವಸಗಳ ಉಪವಾಸ ಮಾಡಿದರು. ಮತ್ತೊಮ್ಮೆ ಹದಿನಾಲ್ಕು ದಿವಸಗಳ ಉಪವಾಸ ಮಾಡಿದರು. ಅವರ ಉಪವಾಸದಿಂದ ಹುಡುಗರ ಮೇಲೆ ಪರಿಣಾಮವಾಗದೆ ಇದ್ದೀತೇ? ಎಲ್ಲ ಹುಡುಗರು ಎಚ್ಚರದಿಂದ ನಡೆಯ ಹತ್ತಿದರು. 'ತಮ್ಮಿಂದ ಅಂಥ ತಪ್ಪುಗಳು ಆಗದಿರಲಿ' ಎಂದು ದೇವರನ್ನು ಬೇಡಿಕೊಂಡರು.

---

## ೨೩. ಮೂರು ವಾರಗಳ ಉಪವಾಸ.

ನಮ್ಮ ದೇಶದಲ್ಲಿ ಹಿಂದುಗಳಿಗೂ ಮುಸಲ್ಮಾನರಿಗೂ ಮೇಲಿಂದ ಮೇಲೆ ಬಡೆದಾಟಗಳಾಗುತ್ತವೆ. ಅದೂ ಧರ್ಮದ ಹೆಸರಿನಲ್ಲಿ. ಧರ್ಮವು ಬಡಿದಾಡಲಿಕ್ಕೆ ಹೇಳಿರುವದೆ? ಇಲ್ಲ, ಬಡಿದಾಡಬೇಕೆಂದು ಯಾವ ಧರ್ಮವೂ ಹೇಳುವದಿಲ್ಲ. ಎರಡನೆಯವರ ಕೂಡ ಪ್ರೀತಿಯಿಂದ ನಡೆಯಬೇಕೆಂದೇ ಎಲ್ಲ ಧರ್ಮಗಳಲ್ಲಿ ಹೇಳಿದೆ. ಹಾಗಾದರೆ ಹಿಂದುಗಳೂ ಮುಸಲ್ಮಾನರೂ ತಮ್ಮತಮ್ಮೊಳಗೆ ಬಡಿದಾಡುವರೇಕೆ? ಅದೇ ಒಂದು ಗೂಢ. ಕಾರಣವಿಲ್ಲದೆ ಬಡೆದಾಟ, ಹೊಡೆದಾಟ; ಒಬ್ಬರ ಕುತ್ತಿಗೆಯನ್ನು ಒಬ್ಬರು ಹಿಚುಕುವದು; ತಲೆ ಒಡೆಯುವದು; ಚೂರಿಯಿಂದ ಇರಿದು ಕೊಲ್ಲುವದು.

ಹಿಂದೂ ಜನರು ಊದುತ್ತ ಬಾರಿಸುತ್ತ ಮೆರವಣಿಗೆ ತೆಗೆಯುತ್ತಾರೆ. ಮುಸಲ್ಮಾನರೆನ್ನುತ್ತಾರೆ, "ನಮ್ಮ ಮಸೀದೆಯ ಮುಂದೆ ವಾದ್ಯಗಳನ್ನು ಬಾರಿಸುತ್ತ ಹೋಗಬೇಡಿರಿ."

ಹಿಂದುಗಳಲ್ಲಿಯ ಒಬ್ಬನು ಎನ್ನುತ್ತಾನೆ, "ಅದೇಕಾದೀತು, ನಾವು ಬಾರಿಸುವವರೇ, ಬಾರಿಸುತ್ತ ಹೋಗುವವರೇ! ನಿನ್ನದೇನು ಗಂಟು ಹೋಯಿತು."

ಆಯಿತು ಬಡಿದಾಟಕ್ಕೆ ಪ್ರಾರಂಭ. ಕೂಡಿದ ಜನರಲ್ಲಿ ಗೊಂದಲವೇ ಗೊಂದಲ. ಒಬ್ಬರನ್ನೊಬ್ಬರು ಬಡೆಯುವದು, ಹೊಡೆಯುವದು, ಕಲ್ಲು ಒಗೆಯುವದು. ಕೈಗೆ ಸಿಕ್ಕವರನ್ನು ಕೊಲ್ಲುವದು.

ಮುಸಲ್ಮಾನರು ಆಕಳು ಮೆರಿಸುತ್ತ ಒಯ್ಯುವರು. ಹಿಂದುಗಳಲ್ಲಿಯ ಒಬ್ಬ, "ಹೀಗೆ ಮೆರಿಸಿ ಆಕಳು ಕೊಂದು ನಮ್ಮ ಮನಸು ನೋಯಿಸಬೇಡಿರಿ" ಎನ್ನುತ್ತಾನೆ.

ಮುಸಲ್ಮಾನನೊಬ್ಬ, "ನಿಮ್ಮಪ್ಪನ ಗಂಟೇನು ಹೋಗುವದು?" ಎನ್ನುತ್ತಾನೆ. ನಡೆಯಿತೇ ಬಡೆದಾಟ.

ಅಂಥ ಇಂಥ ಕಾರಣವಲ್ಲ, ಕ್ಷುಲ್ಲಕ ಕಾರಣಗಳಿಗಾಗಿಯೂ ಹಿಂದೂ ಮುಸಲ್ಮಾನರಲ್ಲಿ ಬಡಿದಾಟ; ಸಾವಿರಾರು ರೂಪಾಯಿಗಳ ಹಾನಿ. ನೂರಾರು ಜೀವಗಳ ಕೊಲೆ. ಹೀಗೆ ಬಡಿದಾಡಬೇಡಿರೆಂದು ಗಾಂಧಿಯವರು ಬೇಕಾದಷ್ಟು ಹೇಳಿದರು. ಅವರ ಮಾತು ಕಿವಿಯ ಮೇಲೆ ಹಾಕಿಕೊಳ್ಳಲೇ ಇಲ್ಲ. ಆವೇಶ ತುಂಬಿದಾಗ ಇಂಥ ಮಾತು ಕೇಳುವವರು ಯಾರು?

ಹಿಂದು-ಮುಸಲ್ಮಾನರಲ್ಲಿ ಜಗಳವಾಗಬಾರದೆಂದು ಗಾಂಧಿಯವರು ಬಹಳ ಪ್ರಯತ್ನ ಮಾಡಿದರು. ಎರಡೂ ಕಡೆಯ ಮುಂದಾಳುಗಳಿಗೆ ಹೇಳಿದರು. ' ನಿಮ್ಮ ನಿಮ್ಮ ಸಮಾಜದವರಿಗೆ ತಿಳಿಸಿ ಹೇಳಿರಿ ' ಎಂದರು. ಆದರೇನು, ಉತ್ತರ ಹಿಂದುಸ್ಥಾನದಲ್ಲಿ ಕೋಹತ ಎಂಬಲ್ಲಿ ಹಿಂದೂ ಮುಸಲ್ಮಾನರ ನಡುವೆ ದೊಡ್ಡ ಜಗಳವಾಯಿತು. ಎರಡೂ ಬಣದವರಲ್ಲಿ ಅನೇಕರ ಕೊಲೆ ಆಯಿತು. ಬಹಳ ಹಾನಿಯಾಯಿತು. ಗಾಂಧಿಯವರು ದೇವರನ್ನು ಪ್ರಾರ್ಥಿಸಿದರು, ' ಎರಡೂ ಬಣದ ಜನರಿಗೆ ಸದ್ಬುದ್ಧಿ ಕೊಡು ' ಎಂದು. ಅದಕಾಗಿ ಇಪ್ಪತ್ತೊಂದು ದಿವಸಗಳ ಉಪವಾಸಮಾಡಿದರು. ಆ ಉಪವಾಸದ ಪರಿಣಾಮವಾಗಿ ಬಡೆದಾಟವು ನಿಲ್ಲಬೇಕೆಂದು ಅವರ ಇಚ್ಛೆ.

ಗಾಂಧಿಯವರು ದಿಲ್ಲಿಯಲ್ಲಿ ಇರುವಾಗ ಈ ಉಪವಾಸ ನಡೆಯಿತು. ದಿಲ್ಲಿಯ ಪ್ರಸಿದ್ಧ ಮುಸಲ್ಮಾನ ಡಾಕ್ಟರರಾದ ಅನಸಾರಿಯವರ ಮನೆಯಲ್ಲಿ ಪ್ರಸಿದ್ಧ ಈ ಹಿಂದುವಿನ ಉಪವಾಸ. ಇಪ್ಪತ್ತೊಂದು ದಿವಸಗಳ ವರೆಗೆ ಗಾಂಧಿಯವರು ನೀರಿನ ಮೇಲೆ ಇದ್ದರು. ಇಪ್ಪತ್ತೆರಡನೆಯ ದಿವಸ ಕಿತ್ತಳೆ-ಹಣ್ಣಿನ ರಸ ತೆಗೆದುಕೊಂಡು ಪಾರಣೆ ಮಾಡಿದರು.

---

# ೨೪. ಹರಿ ಜನರು.

ಪ್ರತಿಯೊಂದು ಊರಲ್ಲಿಯೂ ' ಅಸ್ಪೃಶ್ಯರು ' ಎನ್ನುವವರು ಇರುವರು. ಅಸ್ಪೃಶ್ಯರು ಎಂದರೆ ಮುಟ್ಟದಂಥವರು. ಅವರನ್ನು ಉಳಿದ ಸಮಾಜದವರು ಮುಟ್ಟಸಿಕೊಳ್ಳುವದಿಲ್ಲ. ' ಹೊಲೆಯರು ' ಎಂದೂ ಅವರಿಗೆ ಹೆಸರಿದೆ. ಅವರನ್ನು ಯಾಕೆ ಮುಟ್ಟಸಿಕೊಳ್ಳ ಬಾರದು ? ಅವರು ಏನು ಪಾಪ ಮಾಡಿರುತ್ತಾರೆ ?

" ಅವರು ನಮ್ಮ ಮನೆಯ ಅಂಗಳ ಉಡುಗುತ್ತಾರೆ, ಪಾಯಖಾನೆ ಸ್ವಚ್ಛ ಮಾಡುತ್ತಾರೆ, ಸತ್ತ ದನಕರುಗಳನ್ನು ಒಯ್ದು ಹೊರಗೆ ಹಾಕುತ್ತಾರೆ; ಊರೊಳಗಿನ ಹೊಲಸು ಹೊರಗೆ ಹಾಕುತ್ತಾರೆ; ಅವರದು ಹೊಲಸು ಕೆಲಸ, ಅದರಿಂದ ಮುಟ್ಟಸಿಕೊಳ್ಳಬಾರದು " ಎಂದು ಕೆಲವರು ಹೇಳುತ್ತಾರೆ.

ಹೌದು, ಅವರು ಅಂಥ ಕೆಲಸ ಮಾಡುವದು ನಿಜ. ಇದಕಾಗಿ ಅವರನ್ನು ಮುಟ್ಟಸಿಕೊಳ್ಳಬಾರದೆ ? ಅವರಿಗೆ ಈ ಕೆಲಸವನ್ನು ಕೊಟ್ಟವರು ಯಾರು ? ಮನೆಯೊಳಗೆ ತಾಯಿಯು ಮಕ್ಕಳ ಹೊಲಸನ್ನೆಲ್ಲ ತೆಗೆದು ಹೊರಗೆ ಹಾಕುತ್ತಾಳೆ, ಬೇನೆ ಬಿದ್ದಾಗ ಆರೈಕೆ ಮಾಡುತ್ತಾಳೆ, ಅವಳನ್ನು ಯಾಕೆ ಮುಟ್ಟಸಿಕೊಳ್ಳಬೇಕು ?

ನಮ್ಮ ಹೊಲಸನೆಲ್ಲ ತೆಗೆದುಹಾಕಿ ನಮ್ಮ ಆರೋಗ್ಯದ ಬಗ್ಗೆ ಎಚ್ಚರ ತೆಗೆದುಕೊಳ್ಳುವಂಥ ಜನರಿಗೆ ನಾವು ಮಾಡುವದೇನು ? ಬಾವಿಯ ಮೇಲೆ ಬಂದರೆ ನೀರು ತೆಗೆದುಕೊಳ್ಳುವದಕ್ಕೆ ಬಿಡುವದಿಲ್ಲ.

ಗುಡಿಗುಂಡಾರಗಳಲ್ಲಿ ಬರಗೊಡುವದಿಲ್ಲ. ಸಾಲೆಗಳಲ್ಲಿ ಕಾಲಿಡು ಗೊಡುವದಿಲ್ಲ. ಮನೆಯ ಮುಂದೆ ನಿಲ್ಲಗೊಡುವದಿಲ್ಲ. ಅವರು ಮಾಡುವ ಕೆಲಸಕ್ಕಾಗಿ ಅವರಿಗೆ ಕೊಡುವದೆಂದರೆ, ನಾವು ಉಂಡು ಬಿಟ್ಟ ಎಂಜಲು. ಇದೆಂಥ ಅನ್ಯಾಯ !

ಪರದೇಶಗಳಲ್ಲಿ ಯುರೋಪಿಯನರು ಹಿಂದುಗಳನ್ನು ಬೇರೆ ಕಡೆಗೆ ಇಡುತ್ತಾರೆ. ಅಸ್ಪೃಶ್ಯರಂತೆಯೇ ನಡಿಸಿಕೊಳ್ಳುತ್ತಾರೆ. ಹೀಗೆ ಮಾಡಬಾರದೆಂದು ನಮ್ಮಲ್ಲಿಯ ಜನರು ಹೇಳಿಕೊಳ್ಳುತ್ತಾರೆ. ಆದರೆ ನಮ್ಮ ದೇಶದಲ್ಲಿ ನಮ್ಮ ಜನರನ್ನು ನಾವೇ ಹೀಗೆ ಅವಮಾನ ಮಾಡು ವೆವಲ್ಲ, ಇದಕ್ಕೆ ಏನೆನ್ನಬೇಕು. ?

ಈ ಜನರ ಗೋಳು ಕಂಡು ಗಾಂಧಿಯುವರು ಬಹಳ ಮರುಗು ವರು. ಅವರ ಕಷ್ಟಗಳನ್ನು ದೂರಮಾಡಬೇಕೆಂದು ಹಗಲಿರುಳು ಯತ್ನಿಸುವರು. ಅಸ್ಪೃಶ್ಯತೆಯನ್ನು ಹೊಡೆದೋಡಿಸಬೇಕೆಂದು ಅವರ ಇಚ್ಛೆ. ' ಅಸ್ಪೃಶ್ಯ ' ಎಂಬ ಹೆಸರು ಸಹ ಅವರಿಗೆ ಅಸಹ್ಯವಾಗುವದು. ಅದಕಾಗಿ ಆ ಹೆಸರನ್ನು ಸಹ ಅವರು ಬಾಯಿಂದ ಎನ್ನುವದಿಲ್ಲ. ಆ ಜನರಿಗೆ ಅವರು ' ಹರಿಜನರು ' ಎಂದು ಹೆಸರು ಕೊಟ್ಟಿರುವರು. ಹರಿಜನರು ಎಂದರೆ ವಿಷ್ಣುವಿನ ಭಕ್ತರು. ಗಾಂಧಿಯುವರು ಸ್ವತಃ ವಿಷ್ಣುಭಕ್ತರು, ವೈಷ್ಣವರು. ' ಹರಿ ' ಎನ್ನುವ ದೇವರಿಗೆ ನಡೆದು ಕೊಳ್ಳುವರು. ಗುಜರಾಥಿನ ಅಸ್ಪೃಶ್ಯರು ವಿಷ್ಣುವಿಗೆ-ಹರಿಗೆ- ನಡೆದುಕೊಳ್ಳುವರು. ಅದರಿಂದ ಅವರಿಗೆ ಈ ಹೆಸರನ್ನು ಗಾಂಧಿಯು ವರು ಕೊಟ್ಟಿರುವರು.

# ೨೫. ಆಶ್ರಮದಲ್ಲಿ ಹರಿಜನರು.

ತಮ್ಮ ಆಶ್ರಮದಲ್ಲಿ ಹರಿಜನರೂ ಇರಬೇಕೆಂದು ಗಾಂಧಿಯವರ ಇಚ್ಛೆ. ಮೊದಲಿನಿಂದಲೇ ಎಲ್ಲರಿಗೂ ಅವರು ಆ ಪ್ರಕಾರ ತಿಳಿಸಿದ್ದರು. ಆದರೆ ಮೊದಲು ಮೊದಲು ಅವರ ಈ ಇಚ್ಛೆಯು ಕೈಗೂಡಲಿಲ್ಲ. ಆಶ್ರಮಕ್ಕೆ ಸಹಾಯಮಾಡುವ ಅದೆಷ್ಟೋ ಜನರು ಸಹ ಗಾಂಧಿಯವರು ಬಾಯಿಂದ ಮಾತ್ರ ಹಾಗೆ ಎನ್ನುವರೆಂದೂ ತಮ್ಮ ಆಶ್ರಮದಲ್ಲಿ ಹರಿಜನರನ್ನು ಅವರು ಕರೆದುಕೊಳ್ಳಲಿಕ್ಕಿಲ್ಲವೆಂದೂ ತಿಳಿದುಕೊಂಡಿದ್ದರು.

ಕೆಲವು ದಿವಸ ಹೋಯಿತು. ಹರಿಜನರ ಕುಟುಂಬವೊಂದು ಆಶ್ರಮಕ್ಕೆ ಬಂದಿತು. ಆ ಕುಟುಂಬದಲ್ಲಿ ಇರುವವರು ಮೂರು ಜನ; ಗಂಡ, ಹೆಂಡತಿ, ಮಗಳು.

ಗಾಂಧಿಯವರು ಆ ಕುಟುಂಬದ ಮುಖ್ಯಸ್ಥನನ್ನು ಕೇಳಿದರು. "ಆಶ್ರಮದ ನಿಯಮಗಳು ಗೊತ್ತಿವೆಯೆ? ಆ ನಿಯಮಗಳಿಗೆ ಅನುಸರಿಸಿ ನಡೆಯಲು ಸಿದ್ಧರಿರುವಿರಾ?

ಅವನು ಹೇಳಿದ, "ಓಹೋ ಗೊತ್ತಿರುವವು. ಅದರಂತೆ ನಡೆಯುವೆವು."

ಗಾಂಧಿಯವರು ಆಶ್ರಮದ ನಿಯಮಗಳನ್ನು ಹೇಳಿದರು. ಆ ಮೇಲೆ ಮತ್ತೊಮ್ಮೆ ಎಂದರು. "ನೋಡಿರಿ, ಇದರಲ್ಲಿ ಸ್ವಲ್ಪವೂ ತಪ್ಪಬಾರದು."

ಬಂದವನು—“ ಅದರ ಚಿಂತೆ ಯಾಕೆ?. ನೋಡಿರಿ ಬೇಕಾದರೆ; ಸ್ವಲ್ಪವೂ ತಪ್ಪಲಿಕ್ಕಿಲ್ಲ. ”

ಗಾಂಧಿಯವರು ಆನಂದದಿಂದ ಅವನನ್ನು ಆಶ್ರಮದಲ್ಲಿ ಕರೆದುಕೊಂಡರು. ಎಲ್ಲರ ಕೂಡ ಅವನೂ ಕೆಲಸ ಮಾಡತೊಡಗಿದ. ಆಶ್ರಮದಲ್ಲಿ ಎಲ್ಲರ ಕೂಡ ಊಟವೂ ನಡೆಯಿತು.

ಹೊಲೆಯರೆಂದರೆ ಮೂರುಮಾರು ಹಾರುವ ಜನರು ಸಂಕೋಚ ಮಾಡಿಕೊಳ್ಳತೊಡಗಿದರು. ಅವರನ್ನು ಮುಟ್ಟಲಿಕ್ಕೆ ಹಿಂಜರಿಯ ತೊಡಗಿದರು. ಆಗ ಗಾಂಧಿಯವರು ಹೇಳಿದರು, “ ನನಗೆ ಎಲ್ಲಕ್ಕೂ ಮೊದಲು ಬೇಕಾದವರು ಹೊಲೆಯರು. ಅವರಿರುವದರಿಂದ ತೊಂದರೆಯಾಗುವಂಥವರು ಆಶ್ರಮವನ್ನು ಬಿಟ್ಟು ಹೋಗಬಹುದು. ”

ಆಶ್ರಮದಲ್ಲಿ ಹೊಲೆಯರಿಗೆ ಆಶ್ರಯದೊರೆತುದು ಆಶ್ರಮಕ್ಕೆ ಸಹಾಯ ಮಾಡುವವರಿಗೂ ತಿಳಿಯಿತು. ಆ ಸಹಾಯಕರಲ್ಲಿಯೂ ಹೊಲೆಯರನ್ನು ಮುಟ್ಟುವದೆಂದರೆ ಸಿಡಿದು ಬೀಳುವವರು ಇದ್ದರು. ಅವರು ಕಿಡಿ ಕಿಡಿಯಾದರು. ಆಶ್ರಮಕ್ಕೆ ಸಹಾಯ ಮಾಡುವದನ್ನು ನಿಲ್ಲಿಸಿಬಿಟ್ಟರು.


ಆಶ್ರಮಕ್ಕೆ ಬರುವ ಹಣವು ಕಡಿಮೆಯಾಯಿತು. ಆಶ್ರಮದ ವೆಚ್ಚವು ನಡೆಯುವದು ಸಾಗದಾಯಿತು. ಆಶ್ರಮದ ವ್ಯವಸ್ಥಾಪಕರಾಗಿದ್ದ ಮಗನಲಾಲ ಗಾಂಧಿಯವರು . ಮಹಾತ್ಮಾ ಗಾಂಧಿಯವರ ಹತ್ತಿರ ಬಂದು ಕೇಳಿದರು, “ ಬಾಪೂಜಿ, ಹಣದ ಚೀಲ ಬರಿದಾಯಿತು, ಮುಂದೇನು ? ”

ಗಾಂಧಿ— " ದೇವರಲ್ಲಿ ವಿಶ್ವಾಸವಿರಲಿ. ವೆಚ್ಚ ಸಾಗದಿದ್ದರೆ ಹೊಲೆಗೇರಿಯಲ್ಲಿ ಹೋಗಿ ನಿಲ್ಲೋಣ. ಕೂಲಿಕುಂಬಳಿ ಮಾಡಿ ಹೊಟ್ಟೆ ತುಂಬಿಕೊಳ್ಳೋಣ. ಆದರೆ ಹಣದ ಆಶೆಯಿಂದ–ಹೊಟ್ಟೆಗಾಗಿ—ತತ್ವವನ್ನು ಬಿಡಲಿಕ್ಕಿಲ್ಲ.

ಗಾಂಧಿಯವರು ಹಣದ ವಿಚಾರದಲ್ಲಿರುವಾಗಲೇ ಶ್ರೀಮಂತನೊಬ್ಬ ಸಾವಿರಾರು ರೂಪಾಯಿಗಳನ್ನು ಅವರ ಮುಂದೆ ಸುರುವಿದನು. ಗಾಂಧಿಯವರ ಚಿಂತೆ ದೂರಾಯಿತು. ಆಶ್ರಮವು ವ್ಯವಸ್ಥಿತವಾಗಿ ನಡೆಯಿತು.



ಮಹಾತ್ಮರು ನೂಲುತ್ತಿರುವರು.



ಮಹಾತ್ಮಾ ಗಾಂಧಿ.. [illegible]

# ೨೬. ಹರಿಜನರಿಗಾಗಿ ಉಪವಾಸ.

## ( ೧ )

ಹರಿಜನರು ಹಿಂದುಗಳಲ್ಲವೆ? ಅವರೇನು ಬೇರೆ ಧರ್ಮದವರೆ? ಅಲ್ಲ, ಅವರೂ ಹಿಂದೂ ಧರ್ಮದವರು. ಅವರೂ ನಮ್ಮೊಳಗಿನವರು. ಆದರೆ ಹರಿಜನರೊಳಗಿನ ಕೆಲವರೂ ಸರಕಾರದವರೂ ಹರಿಜನರನ್ನು ಹಿಂದುಗಳಿಂದ ಬೇರೆಯಾಗಿ ಎಣಿಸಿದರು. ಹೀಗೆ ಸರಕಾರದವರು ಗೊತ್ತುಮಾಡಿದಾಗ ಮಹಾತ್ಮಾ ಗಾಂಧಿಯವರು ಸೆರೆಮನೆಯಲ್ಲಿ ಇದ್ದರು. ಅಲ್ಲಿಯೇ ಅವರಿಗೆ ಈ ಸುದ್ದಿ ತಿಳಿಯಿತು. ಇದನ್ನು ಕೇಳಿದ ಕೂಡಲೆ ಗಾಂಧಿಯವರಿಗೆ ಅಸಹ್ಯವಾಯಿತು. ಆಗ ಅವರು ಸರಕಾರಕ್ಕೂ ಜನರಿಗೂ ತಿಳಿಸಿದರು, "ಈ ಭೇದವನ್ನು ತೆಗೆದು ಹಾಕದಿದ್ದರೆ ನಾನು ಸಾಯುವ ವರೆಗೆ ಉಪವಾಸ ಮಾಡುತ್ತೇನೆ" ಎಂದು

ಹರಿಜನರ ಮುಂದಾಳುಗಳೂ ಇನ್ನುಳಿದ ಮುಂದಾಳುಗಳೂ ಕೂಡಿ ವಿಚಾರ ನಡಿಸಿದರು. ಮಹಾತ್ಮರ ಎದುರಿನಲ್ಲಿಯೇ ಚರ್ಚೆ ಆಯಿತು. ಎಲ್ಲರೂ ಒಂದಾದರು; ತಮ್ಮೊಳಗೆ ಒಡಂಬಡಿಕೆ ಮಾಡಿಕೊಂಡರು. ಭೇದವನ್ನು ತೆಗೆದುಹಾಕಿದರು. ಆ ಪ್ರಕಾರ ಸರಕಾರದವರಿಗೆ ತಿಳಿಸಿದರು. ಸರಕಾರದವರೂ ಅದಕ್ಕೆ ಒಪ್ಪಿದರು. ಆಗ ಗಾಂಧಿಯವರು ಉಪವಾಸ ಬಿಟ್ಟರು.

# ೨೭ ಹರಿಜನರಿಗಾಗಿ ಉಪವಾಸ.

## ( ೨ )

ಹರಿಜನರಿಗಾಗಿ ಮಹಾತ್ಮರು ಆಮರಣ ಉಪವಾಸ ಕೈಕೊಂಡುದರ ಪರಿಣಾಮವು ಒಳ್ಳೆಯದೇ ಆಯಿತು. ಎಲ್ಲೆಲ್ಲಿಯೂ ಅಸ್ಪೃಶ್ಯತೆಯನ್ನು ತೆಗೆದುಹಾಕುವ ಪ್ರಯತ್ನಗಳು ನಡೆದವು. ಅಸ್ಪೃಶ್ಯತೆಯನ್ನು ತೆಗೆದುಹಾಕುವದಕ್ಕೆ ಹಿಂದುಸ್ಥಾನದ ತುಂಬ ಹರಿಜನದಿನವು ಆಚರಿಸಲ್ಪಡಬೇಕೆಂದು ಗಾಂಧಿಯವರು ಹೇಳಿದರು. ಆ ಪ್ರಕಾರ ಹರಿಜನ ದಿನಾಚರಣೆಯು ನಡೆಯಿತು.

ಹರಿಜನ ದಿನಾಚರಣೆಯ ರಾತ್ರಿ, ಗಾಂಧಿಯವರು ವಿಚಾರ ಮಾಡುತ್ತ ಕುಳಿತಿದ್ದರು. ಹರಿಜನರ ಮೇಲಾಗುವ ಅನ್ಯಾಯಗಳನ್ನು ದೂರಮಾಡುವ ಸಲುವಾಗಿ ತಮ್ಮಲ್ಲಿ ಇನ್ನೂ ಹೆಚ್ಚಾಗಿ ಆತ್ಮಿಕ ಬಲವು ಬೇಕೆಂದು ಅವರಿಗೆ ಎನಿಸಿತು. ಅಂಥ ಸಾಮರ್ಥ್ಯವು ಹೆಚ್ಚಾಗಬೇಕಾದರೆ ಉಪವಾಸಮಾಡಬೇಕೆಂದು ಅವರ ಮನಸು ಹೇಳಿತು. ಗಾಂಧಿಯವರು ಆಗಲೇ ಮೂರು ವಾರಗಳ ಉಪವಾಸ ಮಾಡುವದನ್ನು ನಿಶ್ಚಯಿಸಿದರು.

ಈ ವೇಳೆಯಲ್ಲಿಯೂ ಗಾಂಧಿಯವರು ಪುಣೆಯ ಸೆರೆಮನೆಯಲ್ಲಿಯೇ ಇದ್ದರು. ಅವರು ಉಪವಾಸಕ್ಕೆ ಪ್ರಾರಂಭ ಮಾಡುವ ಮೊದಲ ದಿನವೇ ಸರಕಾರದವರು ಅವರನ್ನು ಸೆರೆಮನೆಯಿಂದ ಬಿಟ್ಟರು. ಪುಣೆಯಲ್ಲಿ ಠಾಕರಸಿಯವರ ಪರ್ಣಕುಟಿಯಲ್ಲಿ ಗಾಂಧಿ

ಯವರ ಉಪವಾಸವು ನಡೆಯಿತು. ಜಗದೀಶನ ಅನುಗ್ರಹದಿಂದ ಅವರು ಈ ೬೪ ನೆಯ ವರ್ಷದಲ್ಲಿಯೂ ೨೧ ದಿವಸ ಉಪವಾಸ ಮಾಡಿ ತಮ್ಮ ವ್ರತವನ್ನು ಪೂರ್ಣ ಮಾಡಿದರು.

---

## ೨೮. ವಿದ್ಯಾರ್ಥಿಗಳು ಏನು ಮಾಡಬಹುದು.

ಮಹಾತ್ಮರು ಹರಿಜನರಿಗಾಗಿ ಆಮರಣ ಉಪವಾಸ ಮಾಡಿದಾಗ ಕೆಲವು ಹುಡುಗರು ಅವರಿಗೆ ಬೆಟ್ಟಿಯಾಗಲಿಕ್ಕೆ ಹೋಗಿದ್ದರು. ಅವರಿಗೂ ಮಹಾತ್ಮರಿಗೂ ಈ ಕೆಳಗಿನಂತೆ ಸಂಭಾಷಣೆ ನಡೆಯಿತು.

ಹುಡುಗರು—ಹರಿಜನರ ಸೇವೆ ಮಾಡಬೇಕೆಂದು ನಮ್ಮ ಇಚ್ಛೆ. ಆದರೆ ಏನು ಮಾಡಬೇಕು? ನಮ್ಮ ಅವ್ವ ಅಪ್ಪ ಬಿಡುವದೇ ಇಲ್ಲ.

ಗಾಂಧಿಯವರು ಮುಗುಳು ನಗೆ ನಕ್ಕರು. ಅವರಿಗೆ ಹೇಳಿದರು, “ಇದಕಾಗಿ ಹಟಮಾಡಿರಿ. ನಿಮಗೆ ಯಾವದೊಂದು ಪದಾರ್ಥವು ಬೇಕಾದಾಗ ನಿಮ್ಮ ಅವ್ವ ಅಪ್ಪ ‘ಅದನ್ನು ಕೊಡುವದಿಲ್ಲ’ ಎಂದರೆ ನೀವು ಸುಮ್ಮನೆ ಕುಳಿತುಕೊಳ್ಳುವಿರೇನು? ಹಟ ಮಾಡುವದಿಲ್ಲವೆ? ಹಾಗೆಯೆ ಇದ್ಧಕಾಗಿಯೂ ಹಟಮಾಡಿರಿ.”

ಹುಡುಗರು—ಹೌದು, ತಿಳಿಯಿತು. ಇನ್ನು ಹಾಗೆಯೆ ಮಾಡುವೆವು.

ಗಾಂಧಿ—ನಿಮ್ಮ ತಾಯಿ ತಂದೆಗಳು ಸ್ವಲ್ಪದರಲ್ಲಿ ನಿಮ್ಮ ಮಾತಿಗೆ ಒಪ್ಪದಿದ್ದರೆ ಅತ್ತು ಅತ್ತು ಪೀಡಿಸಿರಿ.

ಕೆಲವು ಹುಡುಗರು--ನಮ್ಮ ತಂದೆಯುವರು ಸರಕಾರದ ನೌಕರಿಯಲ್ಲಿರುವರು. ಹರಿಜನರ ಉದ್ಧಾರದ ಕೆಲಸಕ್ಕೆ ಅವರು ಅಂಜುವರು.

ಗಾಂಧಿ--ಅದೇಕೆ ಅಂಜಬೇಕು? ಇದೇನು ಸರಕಾರದ ವಿರುದ್ಧ ಚಳವಳಿಯೆ? ಅವರು ಸಹ ಈ ಕೆಲಸ ಮಾಡಬಹುದು. ಅವರು ಹರಿಜನರ ಉದ್ಧಾರದ ಸಲುವಾಗಿ ಹಣ ಕೂಡಿಸಬಹುದು. ತಮ್ಮ ತಮ್ಮ ಮನೆಗಳಲ್ಲಿ ಹರಿಜನರನ್ನು ಕೆಲಸಕ್ಕೆ ಇಟ್ಟುಕೊಳ್ಳಬಹುದು. ಇನ್ನೂ ಅನೇಕ ರೀತಿಯಲ್ಲಿ ಹರಿಜನರ ಉದ್ಧಾರದ ಕೆಲಸದಲ್ಲಿ ಭಾಗ ತೆಗೆದುಕೊಳ್ಳಬಹುದು.

ಹುಡುಗರು—ನಾವು ಸಾಲೆಗಳಲ್ಲಿ ಹರಿಜನರಿಗಾಗಿ ಯಾವ ಕೆಲಸ ಮಾಡಬಹುದು?

ಗಾಂಧಿ—ಸಾಲೆಗಳಲ್ಲಿ ನೀವು ಏನು ಮಾಡಲೂ ಶಕ್ಯವಿಲ್ಲ. ಅಲ್ಲಿ ನೀವು ಹೋಗುವದೇತಕ್ಕೆ? ಕಲಿಯುವದಕ್ಕಲ್ಲವೆ? ಸಾಲೆಯ ಹೊರಗೆ ನಿಮ್ಮಿಂದಾದಷ್ಟು ಅವರಿಗೆ ಸಹಾಯ ಮಾಡಿರಿ.

ಹುಡುಗರು—ಏನು ಮಾಡಬೇಕು?

ಗಾಂಧಿ—ಹರಿಜನರ ಕೇರಿಗೆ ಹೋಗಿರಿ. ಅವರ ಹುಡುಗರ ಕೂಡ ಆಟವಾಡಿರಿ. ಕಸಬರಿಗೆ ತೆಗೆದುಕೊಂಡು ಅವರ ಓಣಿಯನ್ನು ಸ್ವಚ್ಛಮಾಡಿರಿ. ಸ್ವಚ್ಛವಾಗಿರಲಿಕ್ಕೆ ಅವರಿಗೆ ಕಲಿಸಿರಿ. ಅಸ್ಪೃಶ್ಯರೆಂದು

ತಿಳಿಯುವದಿಲ್ಲವೆಂಬದನ್ನು ಅವರಿಗೆ ತೋರಿಸಿಕೊಡಿರಿ. ಅಣ್ಣ ತಮ್ಮಂದಿರಂತೆ ಅವರೊಡನೆ ನಡೆದುಕೊಳ್ಳಿರಿ. ಅವರನ್ನು ಪ್ರೀತಿಸಿರಿ. ಇಷ್ಟಾದರೆ ಸಾಕು. ನೀವು ಇನ್ನೂ ಚಿಕ್ಕವರು. ಯಾವ ಕೆಲಸವನ್ನು ಹೇಗೆ ಮಾಡಬೇಕೆಂಬದು ದೊಡ್ಡವರಾದ ಮೇಲೆ ನಿಮಗೆ ಸಹಜ ತಿಳಿಯುವದು.

ಹುಡುಗರು ಗಾಂಧಿಯವರಿಗೆ ನಮಸ್ಕಾರ ಮಾಡಿದರು. ಕೈ ನೂಲಿನ ಮಾಲೆಯೊಂದನ್ನು ಕೊರಳಿಗೆ ಹಾಕಿದರು. ಅವರು ಹೇಳಿ ದಂತೆ ನಡೆಯುವದಾಗಿ ಹೇಳಿ ಮನೆಯ ಹಾದಿ ಹಿಡಿದರು.

---

## ೨೯. ಸತ್ಯಾಗ್ರಹ.

ಗಾಂಧಿಯವರ ಆಯುಷ್ಯದ ಬಹುಭಾಗವು ಸೆರೆಮನೆ ಯಲ್ಲಿಯೇ ಹೋಗಿದೆ. ಸೆರೆಮನೆಯಲ್ಲಿ ಯಾಕೆ? ತುಡುಗು ಬಡಿ, ದಾಟ ಮೊದಲಾದವುಗಳನ್ನು ಮಾಡಿದವರನ್ನು ಸೆರೆಮನೆಯಲ್ಲಿ ಇಡು ತ್ತಾರೆ. ಇಂಥ ಸತ್ಯಸಂಧರಾದ ಮಹಾತ್ಮರನ್ನು ಸೆರೆಮನೆಯಲ್ಲಿ ಯಾಕೆ ಇಡಬೇಕು?

ತುಡುಗು ಕಳವು ಮಾಡಿದವರಷ್ಟೇ ಅಲ್ಲ, ಸತ್ಯವಂತರೂ ಸತ್ಪಕ್ಷವನ್ನು ಹಿಡಿದು ಬಡಿದಾಡುವಂಥವರೂ, ಕೆಲವು ವೇಳೆ ಸೆರೆಮನೆ ಕಾಣಬೇಕಾಗುವದು. ಯಾಂವಾಗಲೂ ಜಗತ್ತಿನಲ್ಲಿ ಒಂದು ಸಮಾಜ ದವರ ಮೇಲೆ ಇನ್ನೊಂದು ಸಮಾಜದ ಬಲುಮೆ ನಡೆಗೇ ಇರುತ್ತ ದೆ

ಬಲುಮೆಗೆ ಒಳಪಟ್ಟವರು ತಮ್ಮ ಯೋಗ್ಯವಾದ ಹಕ್ಕುಗಳನ್ನು ಕಾಯ್ದುಕೊಳ್ಳಲು ಹೆಣಗುತ್ತಿರುತ್ತಾರೆ. ಸತ್ಯಾಗ್ರಹವೂ ಇಂಥವುಗಳಲ್ಲಿ ಒಂದು ಮಾರ್ಗ.

ಇದು ಒಂದು ಹೊಸ ಮಾರ್ಗ. ಇದನ್ನು ಆಚರಣೆಯಲ್ಲಿ ತಂದವರು ಗಾಂಧಿಯವರೆ. ಯಾವಾಗಲೂ ಹಿಂಸೆ ಮಾಡಬಾರದೆಂಬದು ಗಾಂಧಿಯವರ ಮುಖ್ಯ ತತ್ವವಿದೆ. ಈ ಸಂಗತಿ ಈ ಮೊದಲು ನಿಮಗೆ ಹೇಳಿಯೇ ಇದೆ. ಅದಕಾಗಿಯೇ ಇಂಥ ಹಕ್ಕುಗಳನ್ನು ಸಂಪಾದಿಸುವಲ್ಲಿಯೂ ಅಹಿಂಸೆಯ ಒಂದು ಹೊಸ ಮಾರ್ಗವನ್ನೇ ಗಾಂಧಿಯವರು ಹುಡುಕಿ ತೆಗೆದಿರುವರು.

ಅವರು ಹೇಳುವದೇನು? ನಿಮ್ಮ ಹಕ್ಕಗಳನ್ನು ಕಿತ್ತುಕೊಂಡ ಜನರನ್ನು ದ್ವೇಷಿಸಬೇಡಿರಿ. ಅವನ್ನು ತಿರುಗಿ ಕೊಡಬೇಕೆಂದು ಕೇಳಿಕೊಳ್ಳಿರಿ. ಅದಕ್ಕವರು ಒಪ್ಪಿದರೆ ನೆಟ್ಟಗಾಯಿತು; ಇಲ್ಲದಿದ್ದರೆ ಅಂಥ ಬಲುಮೆಯನ್ನು ನಿಮ್ಮ ಮೇಲೆ ನಡೆಯಗೊಡದಂತೆ ಪ್ರಯತ್ನಿಸಿರಿ. ನಿಮ್ಮ ಮಾರ್ಗವು ಸತ್ಯವಿರುವದೆಂಬದನ್ನು ಪ್ರತಿಪಕ್ಷಿಗಳಿಗೆ ತೋರಿಸಿಕೊಡಿರಿ. ಆದರೆ ನೀವು ಮಾತ್ರ ಅವರಿಗೆ ಕೇಡು ಬಗೆಯದಿರಿ. ನಿಮ್ಮ ಮನಸ್ಸು ಮಾತ್ರ ಗಟ್ಟಿಯಿರಲಿ. ಯಾರೊಬ್ಬರು ಶರೀರವನ್ನು ಜಯಿಸಬಹುದು; ಶರೀರದ ಮೇಲೆ ಅಧಿಕಾರ ನಡಿಸಬಹುದು. ಆದರೆ ಮನಸ್ಸಿನ ಮೇಲೆ ಯಾರ ಅಧಿಕಾರವೂ ನಡೆಯಲು ಶಕ್ಯವಿಲ್ಲ. ಇಂದಿಲ್ಲ ನಾಳೆ, ನಾಳಿಲ್ಲ ನಾಡಿದು ನಿಮ್ಮ ಮಾತಿಗೆ ಅವರು ಒಪ್ಪಿಕೊಳ್ಳಲೇಬೇಕು. ಅನ್ಯಾಯವು ದೂರಾಗಲೇ ಬೇಕು.

ಅನ್ಯಾಯವನ್ನು ದೂರಮಾಡಿಕೊಳ್ಳುವ ಈ ಮಾರ್ಗಕ್ಕೆ “ ಸತ್ಯಾಗ್ರಹ’ ಎಂದು ಹೆಸರು. ಇದನ್ನು ಮೊದಲು ಆಚರಣೆ ಯಲ್ಲಿ ತಂದವರು ಗಾಂಧಿಯವರು. ಅವರೇ ಅದಕ್ಕೆ ‘ ಸತ್ಯಾಗ್ರಹ’ ಎಂದು ಹೆಸರು ಕೊಟ್ಟಿರುವರು.

---

## ೩೦. ಸತ್ಯಾಗ್ರಹವು ಬಲಹೀನರ ದಾರಿಯೆ ?

ಶಸ್ತ್ರಗಳಿಂದ ಅನ್ಯಾಯಗಳನ್ನು ದೂರಮಾಡಿಕೊಳ್ಳುವ ಸಾಮರ್ಥ್ಯವು ತಮ್ಮಲ್ಲಿಲ್ಲವೆಂದು ಯಾರೂ ಸತ್ಯಾಗ್ರಹದ ಮಾರ್ಗವನ್ನು ಕೈಕೊಳ್ಳಬಾರದು. ಸತ್ಯಾಗ್ರಹವು ಅಶಕ್ತರು ಹಿಡಿಯುವ ಮಾರ್ಗವಲ್ಲ. ಯೋಗ್ಯವಾದ ಹಕ್ಕು ಸಂಪಾದಿಸುವ ಸಲುವಾಗಿ, ಬರುವ ಎಲ್ಲ ಕಷ್ಟಗಳನ್ನು ತಾಳಿಕೊಳ್ಳುವದೆಂದರೆ ಸಾಮಾನ್ಯ ಕೆಲಸವಲ್ಲ. ಶರೀರ ದಿಂದ ಬೇಕಾದಷ್ಟು ಸಶಕ್ತನಿರಲಿ, ಅವನಿಂದ ಈ ಕಾರ್ಯವಾಗದು. ಅದಕ್ಕೆ ಮನಸ್ಸು ಗಟ್ಟಿಯಾಗಬೇಕು. ಅಂಥ ಕಷ್ಟಗಳನ್ನು ಸಹಿಸ ಲಿಕ್ಕೆ ಮನಸ್ಸಿನಿಂದ ಸಿದ್ಧರಾಗಬೇಕು. ಹೀಗೆ ಸಿದ್ಧನಾದವನೇ ಸತ್ಯಾಗ್ರಹವನ್ನು ಮಾಡಲು ಯೋಗ್ಯ. ಶರೀರಶಕ್ತಿಗಿಂತಲೂ ಮನಸ್ಸಿನ ಶಕ್ತಿ ಹೆಚ್ಚಿನದು. ಯಾವನ ಮನಸ್ಸು ಸಶಕ್ತವಾಗಿರುವದೋ ಅವನೇ ಸತ್ಯಾಗ್ರಹವನ್ನು ಮಾಡಬಲ್ಲನು. ಸತ್ಯಾಗ್ರಹವು ಅಶಕ್ತನ ಮಾರ್ಗವಲ್ಲ. ನಿಜವಾದ ಸಶಕ್ತನೇ ಆ ಮಾರ್ಗದಲ್ಲಿ ಕಾಲಿಟ್ಟು ಯಶ ಸಂಪಾದಿಸಬಲ್ಲನು.

---

# ೩೧. ಮಹಾತ್ಮರ ಸತ್ಯಾಗ್ರಹಗಳು.

ಮಹಾತ್ಮರು ಅನೇಕ ಸಾರೆ ಸತ್ಯಾಗ್ರಹ ಮಾಡಿರುವರು. ದಕ್ಷಿಣಆಫ್ರಿಕೆಯಲ್ಲಿ ಹಿಂದೀ ಜನರ ಮೇಲೆ ಅಲ್ಲಿಯ ಸರಕಾರದವರು ಬಲುಮೆ ಮಾಡುತ್ತಿದ್ದರು. ಅದು ಇನ್ನೂ ಪೂರ್ಣ ಹೋಗಿಲ್ಲ. ಗಾಂಧಿಯವರು ಅಲ್ಲಿಗೆ ಹೋದಾಗ ಈ ಬಲುಮೆಯನ್ನು ನೋಡಿ, ಅಲ್ಲಿಯ ಜನರೊಂದಿಗೆ ಸತ್ಯಾಗ್ರಹ ನಡಿಸಿದರು. ಈ ಸತ್ಯಾಗ್ರಹ ಯುದ್ಧದಲ್ಲಿ ಗಾಂಧಿಯವರಿಗೆ ೨-೩ ಸಾರೆ ಸೆರೆಮನೆಗೆ ಹೋಗಬೇಕಾಯಿತು. ಸೆರೆಮನೆಗೆ ಹೋದರು; ಸೆರೆಮನೆಯಲ್ಲಿ ನೆಲ ಅಗಿಯುವದು, ಪಾಯಖಾನೆ ಸ್ವಚ್ಛ ಮಾಡುವದು ಮೊದಲಾದ ಕೆಲಸಗಳನ್ನೂ ಮಾಡಿದರು. ಬಂದ ಕಷ್ಟಗಳನೆಲ್ಲ ಸಹಿಸಿದರು. ಕೊನೆಗೆ ಅಲ್ಲಿಯ ಸರಕಾರವನ್ನು ತಮ್ಮ ಹೇಳಿಕೆಗೆ ಒಪ್ಪಿಸಿದರು. ಸತ್ಯಾಗ್ರಹಯುದ್ಧದಲ್ಲಿ ಜಯ ಸಂಪಾದಿಸಿದರು.

ದಕ್ಷಿಣ ಆಫ್ರಿಕೆಯಿಂದ ಹಿಂದುಸ್ಥಾನಕ್ಕೆ ಬಂದಮೇಲೆ ಚಂಪಾರಣ್ಯದ ರೈತರ ಮೇಲೆ ಅಲ್ಲಿಯ ಯುರೋಪಿಯನ್ ತೋಟಗಾರರು ಮಾಡುವ ಬಲುಮೆಯು ಗಾಂಧಿಯವರ ಕಿವಿಗೆ ಬಿದ್ದಿತು. ಗಾಂಧಿಯವರು ಚಂಪಾರಣ್ಯಕ್ಕೆ ಹೋದರು. ಅಲ್ಲಿಯ ಜನರನ್ನು ಕೂಡಿಕೊಂಡು ಸತ್ಯಾಗ್ರಹ ಮಾಡಿದರು. ಸರಕಾರದವರ ಸಹಕಾರದಿಂದ ಆ ರೈತರ ಮೇಲೆ ಆಗುವ ಬಲುಮೆಯನ್ನು ದೂರ ಮಾಡಿದರು.

# ೩೨ ಸ್ವರಾಜ್ಯಕ್ಕಾಗಿ ಸತ್ಯಾಗ್ರಹ

ಹಿಂದುಸ್ಥಾನವು ಹಿಂದೀ ಜನರ ನಾಡು. ಅಧರ ರಾಜ್ಯತಂತ್ರವು ಹಿಂದೀಯರಿಂದ, ಹಿಂದೀಯರಿಗೆ ಹಿತವಾಗುವಂತೆ ನಡೆಯಬೇಕು. ಇದಕಾಗಿ ಹಿಂದೀಯರು ಸರಕಾರದವರ ಕೂಡ ಈಗ ೩೦-೪೦ ವರ್ಷಗಳಿಂದ ಹೋರಾಡುತ್ತಿರುವರು. ರಾಜ್ಯಕಾರಭಾರದಲ್ಲಿ ಹಿಂದೀಯರಿಗೆ ಕೆಲವು ಹಕ್ಕುಗಳನ್ನಾದರೂ ಕೊಡಿರೆಂದು ಗಾಂಧಿಯವರು ಸರಕಾರಕ್ಕೆ ಬರೆದುಕೊಂಡರು. ಸರಕಾರದವರು ಅದಕ್ಕೆ ಒಪ್ಪಲಿಲ್ಲ. ಆಗ ಗಾಂಧಿಯವರು ಉಪ್ಪಿನ ಕಾಯದೆ ಮುರಿದು ಸತ್ಯಾಗ್ರಹ ಮಾಡಿದರು.

ಸರಕಾರದ ಅಪ್ಪಣೆ ತೆಗೆದುಕೊಳ್ಳದೆ ಉಪ್ಪು ಮಾಡಬಾರದೆಂದು ನಿಯಮವದೆ. ಗಾಂಧಿಯವರು ಅದನ್ನು ಮುರಿದು ಉಪ್ಪು ಮಾಡಿದರು. ಈ ಉಪ್ಪಿನ ಸತ್ಯಾಗ್ರಹವೇ ಸ್ವರಾಜ್ಯ ಸಂಪಾದನೆಗಾಗಿ ಮಾಡಿದ ಮೊದಲನೆಯ ಸತ್ಯಾಗ್ರಹ.

ಸರಕಾರದನರು ಗಾಂಧಿಯವರನ್ನು ಸೆರೆಮನೆಯಲ್ಲಿ ಹಾಕಿದರು. ಗಾಂಧಿಯವರಿಗೆ ಬೆಂಬಲವಾಗಿ ೮೦-೯೦ ಸಾವಿರ ಹಿಂದೀಯರು ಸತ್ಯಾಗ್ರಹ ಮಾಡಿ ಸೆರೆಮನೆಗೆ ಹೋದರು. ಸರಕಾರದವರು ಗಾಂಧಿಯವರೊಡನೆ ಆಲೋಚಿಸಿದರು. ಹಿಂದೀಯರಿಗೆ ಕೊಡತಕ್ಕ ಹಕ್ಕುಗಳ ಸಲುವಾಗಿ ವಿಚಾರಮಾಡುವ ಕುರಿತು ರೌಂಡ ಟೇಬಲ್ ಕಾನಫರನ್ಸು (ದುಂಡುಮೇಜಿನ ಪರಿಷತ್ತು) ನೆರಿಸಿದರು. ಗಾಂಧಿಯವರನ್ನು

ಇಂಗ್ಲಂಡಿಗೆ ಕರೆಸಿಕೊಂಡರು. ಆದರೆ ಇಂಗ್ಲಂಡಿನಿಂದ ಗಾಂಧಿಯವರು ಹಿಂದುಸ್ಥಾನಕ್ಕೆ ಬರುವದರೊಳಗಾಗಿಯೇ ಸರಕಾರದವರ ಧೋರಣ ಬದಲಾಯಿತು. ಸರಕಾರದವರು ಗಾಂಧಿಯವರನ್ನು ಮತ್ತೆ ಸೆರೆಮನೆಯಲ್ಲಿಟ್ಟರು. ಹರಿಜನರಿಗಾಗಿ ಗಾಂಧಿಯವರು ೨೧ ದಿವಸಗಳ ಉಪವಾಸ ಮಾಡಿದಾಗ ಅವರನ್ನು ಸೆರೆಮನೆಯಿಂದ ಬಿಟ್ಟಿದ್ದರು. ಆದರೆ ಆ ಉಪವಾಸವು ಮುಗಿದೊಡನೆ ಮಹಾತ್ಮರು ಸ್ವರಾಜ್ಯಕ್ಕಾಗಿ ಸತ್ಯಾಗ್ರಹಮಾಡುವೆನೆಂದು ಸಾರಿದ್ದರಿಂದ ಸರಕಾರದವರು ಮತ್ತೆ ಅವರನ್ನು ಸೆರೆಯಲ್ಲಿಟ್ಟರು.

ಹರಿಜನರ ಕಾರ್ಯವು ಮಹಾತ್ಮರ ಮುಖ್ಯ ಕಾರ್ಯವಾಗಿದೆ. ಸೆರೆಮನೆಯಲ್ಲಿರುವಾಗ ಆ ಕಾರ್ಯವನ್ನು ಮಾಡುವದಕ್ಕೂ ಸರಕಾರದವರು ಪ್ರತಿಬಂಧ ಮಾಡಿದರು. ಅದರಿಂದ ಮಹಾತ್ಮರು ಆಜನ್ಮ ಉಪೋಷಣೆ ಕೈಕೊಂಡು ಒಂದು ರೀತಿಯಲ್ಲಿ ಸತ್ಯಾಗ್ರಹವನ್ನೇ ನಡಿಸಿದರು. ಸರಕಾರದವರು ಅವರನ್ನು ಈಗ ಬಿಟ್ಟು ಬಿಟ್ಟಿರುವರು.

ಬಲುಮೆಗೆ ವಿರೋಧವಾಗಿ ಮಹಾತ್ಮರು ಹುಡುಕಿ ತೆಗೆದ ಹೊಸ ಯೋಜನೆಯು ಸತ್ಯಾಗ್ರಹ. ಮಹಾತ್ಮರು ತಮ್ಮ ಜೀವಮಾನದಲ್ಲಿ ಅನೇಕ ಸತ್ಯಾಗ್ರಹಗಳನ್ನು ನಡಿಸಿ ಯಶ ಸಂಪಾದಿಸಿರುವರು. ಹಾಗೂ ಸತ್ಯಾಗ್ರಹವನ್ನು ಹೇಗೆ ಆಚರಿಸಬೇಕೆಂಬುದನ್ನು ತೋರಿಸಿಕೊಟ್ಟಿರುವರು.

---

# ೩೩. ಉಪಸಂಹಾರ.

ಇಲ್ಲಿಯ ವರೆಗೆ ಮಹಾತ್ಮರ ಬಗ್ಗೆ ಕೆಲವು ಮಾತುಗಳನ್ನು ಹೇಳಿತು. ಇದು ಅವರ ಪೂರ್ಣ ಚರಿತ್ರೆಯಲ್ಲ. ಗಾಂಧಿಯವರೇ ತಮ್ಮದೊಂದು ಚರಿತ್ರೆಯನ್ನು ಬರೆದಿದ್ದಾರೆ. ಅವರ ಭಾಷಾಂತರವು ಕನ್ನಡದಲ್ಲಿಯೂ ಆಗಿದೆ. ದೊಡ್ಡವರಾದ ಮೇಲೆ ಅದನ್ನು ಓದಿರಿ. ಅವರ ಬಗ್ಗೆ ಹೆಚ್ಚಾಗಿ ತಿಳಿದುಕೊಳ್ಳಿರಿ.



ಮಹಾತ್ಮರ ಉಡುಪಿನಲ್ಲಿ ಅಮೇರಿಕೆಯ ಹುಡುಗ

ದೊಡ್ಡವರಂತೆ ನಡೆಯಬೇಕೆಂದು ಪ್ರತಿಯೊಬ್ಬನಿಗೂ ಎನಿಸುವದು. ಮಹಾತ್ಮರು ಜಗತ್ತಿನಲ್ಲಿಯೇ ಹೆಸರಾದವರು. ಅವರ ಗೌರವ ಕೇಳಿ ಅಮೇರಿಕೆಯಲ್ಲಿಯ ಹುಡುಗರು ಸಹ ಅವರ ಅನುಕರಣ ಮಾಡತೊಡಗಿರುವರು. ಅವರಂತೆ ಉಡುಪು ಮಾಡಿಕೊಳ್ಳುವರು, ಕುಳಿತುಕೊಳ್ಳುವರು, ನಡೆಯುವರು.

ಉಡಿಗೆ-ತೊಡಿಗೆಗಳಲ್ಲಿ ಮಾತ್ರ ಅವರ ಅನುಕರಣ ಮಾಡಿದರೆ ಆಗದು. ಗಾಂಧಿಯವರಂತೆ ಗೌರವ ಸಂಪಾದಿಸಬೇಕಾದರೆ ಅವರ ನಡೆವಳಿಯನ್ನು ಪೂರ್ಣವಾಗಿ ಆಚರಿಸಲಿಕ್ಕೆ ಬೇಕು. ಗಾಂಧಿಯವರು ನುಡಿದಂತೆ ನಡೆಯುವವರು. ಅದರಿಂದಲೇ ಅವರಿಗೆ ಗೌರವ ಬಂದಿದೆ.

ಗಾಂಧಿಯವರಂತೆ ಸತ್ಯ ಮಾತಾಡಿರಿ, ಅಹಿಂಸೆಯ ತತ್ವವನ್ನು ಪಾಲಿಸಿರಿ, ದುರ್ಬಲರ ಮೇಲಾಗುವ ಅನ್ಯಾಯಗಳನ್ನು ದೂರ ಮಾಡಲಿಕ್ಕೆ ಯತ್ನಿಸಿರಿ. ಎಲ್ಲರ ಕೂಡ ಪ್ರೇಮದಿಂದ ನಡೆಯಿರಿ. ಎಂದರೆ ನೀವೂ ಮಹಾತ್ಮರಾಗುವಿರಿ. ತಮ್ಮ ಆಚರಣೆಯಿಂದ ಜಗತ್ತನ್ನೇ ದಂಗುಬಡಿಸಿದ, ಹಿಂದುಸ್ಥಾನಕ್ಕೆ ಕೀರ್ತಿ ತಂದುಕೊಟ್ಟ ಮಹಾತ್ಮರಿಗೆ ಆಯುರಾರೋಗ್ಯಗಳನ್ನು ದಯಪಾಲಿಸೆಂದು ದೇವರಲ್ಲಿ ಪ್ರಾರ್ಥಿಸಿರಿ. ಪುಸ್ತಕವನ್ನು ಕೆಳಗಿಡುವಾಗ ಇನ್ನೊಮ್ಮೆ ಮಹಾತ್ಮರ ಜಯಜಯಕಾರ ಮಾಡಿರಿ. ಎನ್ನಿರಿ ‘ ಗಾಂಧೀಮಹಾರಾಜಕೀ ಜಯ ! ಮಹಾತ್ಮಾ ಗಾಂಧೀಮಹಾರಾಜಕೀ ಜಯ !!

**ಹೊರಡಲಿದೆ! ತಾರೀಖಿನ ಕಡೆ ಲಕ್ಷ್ಯಕೊಡಿರಿ! ಬೇಗನೆ ಹೊರಡಲಿದೆ!!**

ಅಖಿಲ ಕರ್ನಾಟಕದಲ್ಲಿ ಕಥೆಗಳ ಪತ್ರಿಕೆಯೆಂದರೆ ಇದೊಂದೆ!

**ಡೇಮಿ ೧/೮ ರ ೩೨ ಪುಟಗಳು! ಸುರಸಕಥೆಗಳ ಸುಗ್ಗಿ!!** ಸುಂದರವಾದ ಮುದ್ರಣ!

ಮಾಸಪತ್ರಿಕೆ! — **ಕಥಾ ಕುಂಜ** — ಪ್ರತಿ ತಿಂಗಳ ಮೊದಲ ವಾರದಲ್ಲಿ ಹೊರಡುವದು.

ಸಂಪಾದಕರು.

ಶ್ರೀಯುತ— **ಪ್ಯಾಟಿ ಶಾಮರಾಯರು.**

ಈಗೆರಡು ವರುಷಗಳಿಂದ ನಡೆಯುತ್ತ ಬಂದ ಒಂದಾಣೆ ಮಾಲೆಯನ್ನು ಹಾಗೇ ನಡೆಯಿಸುವದಲ್ಲದೆ ಈ ಮಾಸಪತ್ರಿಕೆಯನ್ನೂ ಬೇಗನೇ ಹೊರಡಿಸುವದು ಗೊತ್ತು ಮಾಡಿದ್ದೇವೆ. ಆದ್ದರಿಂದ ಕನ್ನಡಿಗರೆಲ್ಲರು ಮುನ್ನಿನಂತೆ **ತನು ಮನ-ಧನ**ಗಳಿಂದ ಸಹಾಯಮಾಡಬೇಕಾಗಿ ಬಿನ್ನಹ.

ಕನ್ನಡಿಗರೇ! ನಿಮಗೆ ಕನ್ನಡ ನಾಡಿನ **ಸುಪ್ರಸಿದ್ಧ ಕಥೆಗಾರರ ಕಥೆಗಳನ್ನು ಒಂದೆಡೆಗೆ ಓದಬೇಕೆಂದಿದ್ದರೆ ಕಥಾ ಕುಂಜಕ್ಕೆ ಚಂದಾದಾರರಾಗಿರಿ!**

**ವಾ. ಚಂದಾ. ಊರವರಿಗೆ ೨-೦-೦ ಪರವೂರವರಿಗೆ ೨-೪-೦ (ಅ. ವೆ. ಸೇ.) ವ್ಹಿ. ಪಿಯಿಂದ ೨-೮-೦ ವಾಚನಾಲಯಗಳಿಗೆ ೨-೧೨-೦ ಪೋಷಕರಿಗೆ ೫-೧೦ ರೂ. ಗಳು ಆಜೀವ ಚಂದಾದಾರರಿಗೆ ೫೦ ರೂ.**

**ಕಥೆ ಕೊಡಲೊಪ್ಪಿದ ಸುಪ್ರಸಿದ್ಧ ಮಹನೀಯರು.**

**ಶ್ರೀ. ಕೋ. ಶಿ. ಕಾರಂತ. ಪಂಡಿತ ತಾರಾನಾಥ. ಶ್ರೀ. ಕಡೆಂಗೊಡ್ಲು ಶಂಕರಭಟ್ಟ. ಶ್ರೀ. ಆನಂದ ಬೆಂಗಳೂರು. ಪ್ರೋ. ಮುಗುಳಿ ಪ್ರೋ. ಸಾಸನೂರ ಶ್ರೀ. ದೇವಡು ನರಸಿಂಹಾಚಾರ್ಯ ಶ್ರೀ. ಜಿ. ಪಿ. ರಾಜರತ್ನಂ. ಶ್ರೀ. ಸಿ. ಕೆ. ವೆಂಕಟರಾಮಯ್ಯ ಶ್ರೀ. ಎಂ. ಪಿ. ವಾಲಿ ಶ್ರೀ. ಎಂ. ಎನ್. ಕಾಮತ ಶ್ರೀ. ಅ. ನ. ಕೃಷ್ಣರಾಯ ಶ್ರೀ. ಕುಡ್ವಿ ವಾಸುದೇವ ಶೇಣೈ ಶ್ರೀ. ಸಿಂಪಿಲಿಂಗಣ್ಣ. ಇವರಲ್ಲದೆ ಇತರ ಕಥೆಗಾರರೂ ಬರೆಯಲೊಪ್ಪಿದ್ದಾರೆ.**

ಇನ್ನೊಂದು ವೈಶಿಷ್ಟ್ಯವೆಂದರೆ—ಮಕ್ಕಳ ಕಥೆಗಳಿಗಾಗಿ ಕೆಲವು ಪುಟಗಳನ್ನು ಕಾಯ್ದಿಡಲಾಗುವದು.

ಕಥೆಗಳನ್ನು ಕಳಿಸುವವರು, ಬೇಗನೆ ಕಳಿಸಬೇಕು. ವ್ಯಾಪಾರಸ್ಥರು ತಮ್ಮ ಸರಕಿನ ಜಾಹೀರಾತು ಕೊಟ್ಟು ಲಾಭ ಪಡೆಯಬೇಕು.

ಎಜಂಟರಾಗುವವರು ಪತ್ರವ್ಯವಹಾರ ಮಾಡಬೇಕು. ಂದಾದಾರರಾಗುವವರು ಮುಂಗಡ ಹಣ ಕಳಿಸಬೇಕಾಗಿ ವಿನಂತಿ.

ಆಡಳಿತಗಾರರು,

ಕಥಾಕುಂಜ ಕಾರ್ಯಾಲಯ ಬಸವನ ಬೀದಿ ಬೆಳಗಾವಿ.

## ಒಂದಾಣೆಮಾಲೆಯ ಪುಸ್ತಕಗಳು.

| | |
|---|---|
| ೧ ಭಾರ್ಗವಿ ( ಶಿಲ್ಕಿಲ್ಲ ) | ೧೦ ಹಿಂದೂ ಮುಸಲ್ಮಾನ |
| ೨ ಪುನರುಜ್ಜೀವನ | ೧೧ ವಿಚಿತ್ರ ನ್ಯಾಯ |
| ೩ ಎಚ್ಚರ | ೧೨ ಪೋಸ್ಟ ಮಾಸ್ತರ |
| ೪ ನಿಸರ್ಗಾವಮಾನ ( ಶಿಲ್ಕಿಲ್ಲ ) | ೧೩ ಸಮಾಜಸೇವೆ |
| ೫ ಸ್ವಾರ್ಥತ್ಯಾಗ ( ,, ) | ೧೪ ರಾಜಾಹರದೌಲ |
| ೬ ಸಾವಿತ್ರೀ ಸಾಹಸ ( ,, ) | ೧೫ ಬುದ್ಧಿಬಂತು |
| ೭ ನಿರ್ದೋಷಿ ( ,, ) | ೧೬ ವೇದಾಂತಿ |
| ೮ ಅದೃಷ್ಟವಲ್ಲ ಅದೃಷ್ಟಿ | ೧೭ ಆದರ್ಶನೊಬ್ಬನೇ ! |
| ೯ ಲೋ. ಬೋ. ಲೋ. ಬೋ. | ೧೮ ಕವಿಕರ್ಮ |

ಒಮ್ಮೆಲೆ ೧೦೦ ರೂ. ಗಳ ಪುಸ್ತಕಗಳನ್ನು ರೋಖ ಹಣ ಕೊಟ್ಟು ಕೊಳ್ಳುವ ವ್ಯಾಪಾರಸ್ಥರಿಗೆ ೧೦೦ ಕ್ಕೆ ೩೩ ರಂತೆ ಕಮೀಶನ ಕೊಡುವೆವು. ಪ್ರತಿಗಳು ತೀರಾ ಸ್ವಲ್ಪಿವೆ. ಬೇಗನೆ ಆರ್ಡರು ಕೊಡಿರಿ !

**ಶ್ಯಾಮರಾವ ಪ್ಯಾಟ**

ಪ್ರೊಪ್ರಾಯಿಟರ, ಒಂದಾಣೆಮಾಲೆ ಬೆಳಗಾಂವಿ.

ನಮ್ಮಲ್ಲಿ ಎಲ್ಲ ತರದ ಫೋಟೊ ಎನ್‌ಲಾರ್ಜಮೆಂಟ, ವರ್ತಮಾನ ಪತ್ರಿಕೆ, ಮಾಸ ಪತ್ರಿಕೆಗಳಲ್ಲಿ ಹಾಕುವ ಬ್ಲಾಕುಗಳಿಗಾಗಿ ' ಲಾಯಿನ್ ವರ್ಕ ' ಮತ್ತು ' ಬ್ಲ್ಯಾಕ್ ಎಂಡ ವ್ಹಾಯಿಟ ' ಡಿಝಾಯಿನ್ಸ, ಇದಲ್ಲದೆ ಔಷಧದ ಡಾಕ್ಸ, ಬಾಟ್ಲಿಯ ಮೇಲಿನ ಲೇಬಲ ಮೊದಲಾದ ಎಲ್ಲ ಬಗೆಯ ಡಿಝಾಯಿನುಗಳನ್ನು ಯೋಗ್ಯ ಬೆಲೆಗೆ ಸೊಗಸಾಗಿ ಮಾಡಿಕೊಡಲಾಗುತ್ತೆ.

**G. S. Huddar & Co.,**

*C/o* K. S. S. Mandal. Belgaum.

# ಬೆಳಗಾಂವಿಯಲ್ಲಿ ಹೊಸ ಮಾದರಿಯ ಕನ್ನಡ ಪುಸ್ತಕಗಳು ಸಿಗುವ ಸ್ಥಳವೆಂದರೆ ಕ. ಸಾ. ಸೇ. ಮಂಡಲ.

ಬೇಗ ಬನ್ನಿರಿ! ಕೊಂಡು ಓದಿ ಆನಂದಪಡೆಯಿರಿ!

ರಸಸಾಹಿತ್ಯದ ಒಳ್ಳೇ ಪುಸ್ತಕಗಳು.

| | | |
|---|---|---|
| ೧ | ಹೊಸಹುಟ್ಟು | ೧-೦-೦ |
| ೨ | ಆದದ್ದೇನು? | ೦-೬-೦ |
| ೩ | ತ್ರಿಶಂಕು ಸ್ವರ್ಗ | ೦-೮-೦ |
| ೪ | ಆಹುತಿ | ೧-೨-೦ |
| ೫ | ಪ್ರಳಯತಾಂಡವ | ೦-೬-೦ |
| ೬ | ಜನಜೀವನ | ೦-೮-೦ |
| ೭ | ದೇಶಭಕ್ತಿಯ ಕಥೆಗಳು | ೦-೩-೦ |
| | ,, | ೦-೮-೦ |
| ೮ | ಕಳ್ಳರ ಕೂಟ | ೦-೬-೦ |
| ೯ | ರಾಣಾರಾಜಸಿಂಹ | ೦-೧೧-೦ |
| ೧೦ | ವೀರವಲ್ಲಭಭಾಯಿ | ೦-೧೦-೦ |
| ೧೧ | ಯಜ್ಞಕುಂಡ | ೧-೪-೦ |
| ೧೨ | ದೇವೀದ್ವೈಯದರ್ಪಪ್ರಭಾವ | ೧-೦-೦ |
| ೧೩ | ಮಹಾಂತೇಶ ಲೀಲಾಮೃತ | ೧-೪-೦ |
| ೧೪ | ಮಯೂರ ೧ನೇ ಭಾಗ | ೦-೮-೦ |
| ೧೫ | ಉಪನಿಷತ್‌ರಹಸ್ಯ | ೩-೦-೦ |
| ೧೬ | ಗೀತೆಯ ಗುಟ್ಟು | ೧-೨-೦ |
| ೧೭ | ಕರ್ನಾಟಕವೀರ ರತ್ನಗಳು | ೧-೦-೦ |
| ೧೮ | ಕನ್ನಡಿಗರ ಸರ್ವಸ್ವ | ೧-೦-೦ |
| ೧೯ | ರತ್ನಾ | ೧-೪-೦ |
| ೨೦ | ವೀರಮಾತಾಕುಂತಿ | ೧-೦-೦ |
| ೨೧ | ಭಾವಗೀತೆ | ೧-೦-೦ |
| ೨೨ | ಕುರುಡ ಧರ್ಮ | ೦-೧೨-೦ |
| ೨೩ | ಭರತಖಂಡದ ಜೀವಜ್ಯೋತಿಗಳು | ೧-೦-೦ |
| ೨೪ | ಪತಿವಶೀಕರಣ | ೦-೧೨-೦ |
| ೨೫ | ಸುರತನಗರ ಶ್ರೇಷ್ಠಿ | ೧-೪-೦ |
| ೨೬ | ಶ್ರೀಗುರು ಚರಿತ್ರ | ೧-೧೨-೦ |
| ೨೭ | ,, | ೪-೦-೦ |
| ೨೮ | ಜ್ಞಾನೇಶ್ವರಿ ಭಾಗ | ೧-೪-೦ |
| ೨೯ | ಪುರಂದರದಾಸರ ಪದ ೫ ಭಾಗ | ೩-೪-೦ |
| ೩೦ | ಕನಕದಾಸರ ಪದ | ೦-೧೦-೦ |
| ೩೧ | ಹರಿಕಥಾಮೃತಸಾರ | ೦-೧೩-೦ |
| ೩೨ | ವರದಕ್ಷಿಣೆ | ೦-೬-೦ |
| ೩೩ | ವಿದ್ಯಾರಣ್ಯ ಚರಿತ್ರೆ | ೧-೦-೦ |

# ಮನೋಹರ ಗ್ರಂಥಮಾಲಾ ಧಾರವಾಡ.

ವರುಷದಲ್ಲಿ ಅತ್ಯುತ್ತಮವಾದ ಆರು-ಗ್ರಂಥಗಳು.

ಒಂದೊಂದು ಗ್ರಂಥ ೧೪೦ ಪುಟಗಳದು.

ವಾರ್ಷಿಕ ವರ್ಗಣಿ ಅಂಚೆವೆಚ್ಚ ಸೇರಿ ೩-೮-೦

೧ನೆಯ ಗ್ರಂಥ..

ಸುದರ್ಶನ

ಸ್ವತಂತ್ರ ಸಾಮಾಜಿಕ ಕಾದಂಬರಿ.

ಲೇಖಕರು ಆನಂದಕಂದ.

೨ನೆಯ ಗ್ರಂಥ

ನವಿಲುಗರಿ ( ಬೇರೆ ಬೇರೆ ಕತೆಗಾರರ ಕತೆಗಳ ಸಂಗ್ರಹ. )

ಕನ್ನಡಿಗರು ನೆರವಿತ್ತು ಮಾಲೆಯ ಸೇವೆಯನ್ನು ಕೈಕೊಳ್ಳಬೇಕು.

ಕಾರ್ಯದರ್ಶಿ ಮನೋಹರ ಗ್ರಂಥಮಾಲಾ ಧಾರವಾಡ.

---

ವಾ. ಚಂದಾ **ಭಾರತಿ** ರೂ. ೨-೪-೦

# ಭಾರತಿ

ಹಿಂದುಸ್ಥಾನ, ಮತ್ತು ಬರ್ಮಾ ದೇಶದಲ್ಲಿ ಸರ್ವತ್ರ ಪ್ರಚಾರವಾಗುತ್ತಿರುವ ಕನ್ನಡ ಮಾಸಪತ್ರಿಕೆ.

ಕರ್ನಾಟಕದ ಪ್ರಸಿದ್ಧ ಲೇಖಕರಿಂದ ಬರೆಯಲ್ಪಟ್ಟ, ಧಾರ್ಮಿಕ, ಸಾಮಾಜಿಕ, ನೈತಿಕ, ಸಾಹಿತ್ಯಿಕ ಚರಿತ್ರ, ವಿಜ್ಞಾನ ಇತ್ಯಾದಿ ಅಮೂಲ್ಯ ವಿಚಾರಗಳನ್ನೊಳಗೊಂಡ ಲೇಖನಗಳಿಂದಲೂ ಹೊಸಮಾದರಿಯ ಕವನಗಳಿಂದಲೂ, ಮನೋರಂಜಕವಾದ ಸಣ್ಣಪುಟ್ಟ ಕಥೆಗಳಿಂದಲೂ ಕೂಡಿದ್ದು, ಪ್ರತೀ ತಿಂಗಳ ಅಂತ್ಯದಲ್ಲಿ ತಪ್ಪದೆ ಹೊರಡುವದು.

ಚಂದಾದಾರರಾಗಿ ಸೇರ್ಪಡಿರಿ. ಜಾಹೀರಾತುದಾರರಿಗೆ ಸುಸಂಧಿ.

ವ್ಯ. ಭಾರತಿ ಕಾರ್ಯಾಲಯ ಮೂಲ್ಕಿ ( ದ. ಕ. )

# ರಾಜಹಂಸ.

## ದೈನಿಕ ಹಾಗೂ ಸಾಪ್ತಾಹಿಕ ಪತ್ರಿಕೆ.

## ಕರ್ನಾಟಕದಲ್ಲಿ ಮೊಟ್ಟಮೊದಲನೆಯ ದೈನಿಕ ಪತ್ರಿಕೆ.

ರಾಜಹಂಸವು ಕಳೆದ ೧೮ ವರ್ಷಗಳಿಂದ ಕನ್ನಡಿಗರ ಸೇವೆಯನ್ನು ಮಾಡುತ್ತ ಬಂದಿದೆ. ಈ ಪತ್ರಿಕೆಯಲ್ಲಿ ಸಾಮಾಜಿಕ ರಾಜಕೀಯ ಔದ್ಯೋಗಿಕ ಮೊದಲಾದ ವಿಷಯಗಳು ನಿರ್ಭಿಡೆಯಿಂದ ಚರ್ಚಿಸಲ್ಪಡುತ್ತವೆ.

**ಅಂಚೇ ವೆಚ್ಚ ಸೇರಿ ವರ್ಗಣೀ ದರಗಳು.**


| ದಿನಪತ್ರಿಕೆ. | ವಾರಪತ್ರಿಕೆ. |
|---|---|
| ೧ ವರ್ಷಕ್ಕೆ ೯ ರೂ. | ೧ ವರ್ಷಕ್ಕೆ ೩ ರೂ |
| ೬ ತಿಂಗಳಿಗೆ ೫ ರೂ. | ೬ ತಿಂಗಳಿಗೆ ೧\|\|- ರೂ. |
| ೩ ತಿಂಗಳಿಗೆ ೨\|\|- ರೂ. | ೩ ತಿಂಗಳಿಗೆ ೧ ರೂ. |
| ಬಿಡಿ ಪತ್ರಕ್ಕೆ ೩ ಪೈ | ಬಿಡಿ ಪತ್ರಕ್ಕೆ ೧ ಆಣೆ |

ಪ್ರಾಮಾಣಿಕ ಮತ್ತು ಹುರುಪಿನ ಎಜಂಟರು ಎಲ್ಲಕಡೆಯಲ್ಲಿಯೂ ಬೇಕು!

ಮ್ಯಾನೇಜರ:—**ರಾಜಹಂಸ ಧಾರವಾಡ.**

---

## ಮಹನೀಯರೇ ಇತ್ತ ಕಡೆಗೆ ಲಕ್ಷ್ಯ ಕೊಡಿರಿ.



ಕಿರ್ಲೋಸ್ಕರ ಕಬ್ಬಿಣ ಖುರ್ಚಿ, ಮುಂತಾದ ಫರ್ನಿಚರಗಳು ತಾಳಿಕೆಯಲ್ಲಿ ಬಲುಗಟ್ಟಿ, ಬೆಲೆಯಲ್ಲಿ ಕಡಿಮೆ.

ಇವುಗಳಲ್ಲಿ ಸಾದಾ ಖುರ್ಚಿ, ಮಡಿಕೆ ಖುರ್ಚಿಗಳೆಂದು ಎರಡು ಪ್ರಕಾರಗಳಿವೆ. ಹೆಚ್ಚಿನ ಮಾಹಿತಿ ಬಗ್ಗೆ ಈ ಹೊತ್ತೇ ಬರೆಯಿರಿ.

**ಕಿರ್ಲೋಸ್ಕರ ಬಂಧುಗಳು ಲಿಮಿಟೆಡ**

**ಕಿರ್ಲೋಸ್ಕರವಾಡಿ, (ಜಿ. ಸಾತಾರಾ.)**

# ಸ್ವದೇಶೀ ಪ್ರಚಾರಕ.

(ಸಚಿತ್ರ ಕನ್ನಡ ಮಾಸಪತ್ರಿಕೆ.)

ವಾರ್ಷಿಕ ಚಂದಾ-ಅಂಚೆವೆಚ್ಚ ಸೇರಿ ರೂ. ೧—೪—೦ ಮಾತ್ರ.

ಸ್ವದೇಶೀ ವಿಚಾರಗಳು. ಸ್ವದೇಶೀ ಕಥೆಗಳು. "ಸ್ವದೇಶೀ ವಿನೋದ" ಸ್ವದೇಶಿ ವಾರ್ತೆಗಳು.

ಆರ್ಥಿಕ—ವಾಣಿಜ್ಯ ಸಂಬಂಧವಾದ ಲೇಖನಗಳು. ರಾಜಕಾರ್ಯಕಲಾಪಗಳ ಜೀವನ ಚರಿತ್ರಗಳು—ಇತ್ಯಾದಿ.

ವ್ಯ.- "ಸ್ವದೇಶಿ ಪ್ರಚಾರಕ" ರಥಬೀದಿ, ಮಂಗಳೂರು, (ದಕ್ಷಿಣ ಕನ್ನಡ).

ವಿ. ಸೂ. ಮಾದರಿ ಸಂಚಿಕೆಯನ್ನಪೇಕ್ಷಿಸುವವರು ಎರಡಾಣೆ ಅಂಚೆ ಚೀಟನ್ನು ಕಳುಹಿಸಬೇಕು.

---

# ತರುಣ ಕರ್ನಾಟಕ.

## ದಿನಪತ್ರಿಕೆ ಮತ್ತು ವಾರಪತ್ರಿಕೆ.

ಸಂಪಾದಕರು:-ಎಲ್. ಎಸ್. **ಪಾಟೀಲ**

ದಿನಪತ್ರಿಕೆ ರಾಯಲ್ ೬ ಪುಟಗಳು ಬಿಡಿಪತ್ರಿಕೆ ಬೆಲೆ ೬ ಪೈ.

ವಾರಪತ್ರಿಕೆ ೧೬ ಪುಟಗಳು ಬಿಡಿಪತ್ರಿಕೆ ಬೆಲೆ ೧ ಆಣೆ.

ದಿನಪತ್ರಿಕೆಯ ಚಂದಾ ೯ ರೂ. ವಾರಪತ್ರಿಕೆಯ ಚಂದಾ ೩॥ ರೂ.

**ಬೇಗನೇ ಚಂದಾದಾರರಾಗಿ ಪ್ರೋತ್ಸಾಹಿಸಿರಿ.**

ವ್ಯವಸ್ಥಾಪಕ, '**ತರುಣ ಕರ್ನಾಟಕ**' ಹುಬ್ಬಳ್ಳಿ.

---

# "ಬಡವರ ಬಂಧು"

## ಮಾಸಪತ್ರಿಕೆ.

ಹಂಪನಕಟ್ಟೆ **ಮಂಗಳೂರು**

**ವರ್ಷಕ್ಕೆ ಒಂದು ರೂಪಾಯಿ.** ಅಂಚೇ ವೆಚ್ಚ ನಾಲ್ಕಾಣೆ ಪ್ರತ್ಯೇಕ.

ಕನ್ನಡದ ರುಚಿಯನ್ನರಿಯಬೇಕೆ? ಇದನ್ನು ತರಿಸಿಕೊಳ್ಳಿ. ಹಾಸ್ಯ, ಪದ್ಯ, ಒಗಟು ದೇಶವಿದೇಶವಾರ್ತೆ, ಇತ್ಯಾದಿಗಳು ಇದರಲ್ಲಿ ಪ್ರಕಟವಾಗುವವು.